ಶ್ರೀ ಅಖಿಲ ಹವ್ಯಕ ಮಹಾಸಭಾ
ಹವ್ಯಕ ಗ್ರಂಥಾಲಯ
541
2
ಮಲ್ಲೇಶ್ವರಂ, ಬೆಂಗಳೂರು - 03.

ಯಕ್ಷಗಾನ

ಚಂದ್ರಗುಪ್ತ ಚಾಣಿಕ್ಯರ ಚರಿತ್ರೆ

ವಿದ್ವಾನ್ ಟಿ. ಕೇಶವಭಟ್ಟರಿಂದ
ಹವ್ಯಕ ಗ್ರಂಥಾಲಯಕ್ಕೆ
ದೇಣಿಗೆ ಬಂದ ಪುಸ್ತಕ.

ಜಾಣ ಮಂಜಪ್ಪ

Scanned by CamScanner

ಯಕ್ಷಗಾನ

ಚಂದ್ರಗುಪ್ತ ಚಾಣಕ್ಯರ ಚರಿತ್ರೆ

ಶ್ರೀ ಅಖಿಲ ಹವ್ಯಕ ಮಹಾಸಭಾ
ಹವ್ಯಕ ಗ್ರಂಥಾಲಯ
841/2
ಮಲ್ಲೇಶ್ವರಂ, ಬೆಂಗಳೂರು - 03.

ವಿ|| ಶ್ರೀ ಟಿ. ಕೇಶವ ಭಟ್ಟರಿಗೆ
([illegible])
ಕೃತಿಗಳ ವಿಮರ್ಶೆಯ ಕೃಪೆಗಾಗಿ [illegible]
[illegible] ಕೊಡುಗೆ.

ಚಂದ್ರಗುಪ್ತನ ಬಂಧವಿಮೋಚನೆ

ಅಮಾತ್ಯ ರಾಕ್ಷಸನ ಭೇದೋಪಾಯ ಭಂಗ

ನವನಂದರ ನಿರ್ಯಾಣ

ವಿದ್ವಾನ್ ಟಿ. ಕೇಶವಭಟ್ಟರಿಂದ
ಹವ್ಯಕ ಗ್ರಂಥಾಲಯಕ್ಕೆ
ದೇಣಿಗೆ ಬಂದ ಪುಸ್ತಕ.

ಲೇಖಕರು

ಜಾಣ ಮಂಜಪ್ಪ, ಕೆರೆಕೊಪ್ಪ

ಪ್ರಕಾಶಕರು :

ಜಾಣ ಮಂಜಪ್ಪನವರು, ಕೆರೆಕೊಪ್ಪ
ಅಂಚೆ : ನಿಸರಾಣಿ
ಸೊರಬ ತಾಲ್ಲೂಕು ಶಿವಮೊಗ್ಗ ಜಿಲ್ಲೆ

Scanned by CamScanner

ಶ್ರೀಸಾಮಾನ್ಯರೂ ರಾಜಕಾರಣಿಗಳೂ ಕಲಿಯಬೇಕಾದ ಅನೇಕಾನೇಕ ವಿಷಯಗಳನ್ನೊಳಗೊಂಡ ಚಾಣಕ್ಯತಂತ್ರವೆಂಬುದು ಅದ್ಭುತರವ್ಯ ನವರಸಗಳಿಂದ ಕೂಡಿದ ಕಥೆಯಾಗಿದ್ದು, ಮನರಂಜನೆಯ ಕಾರ್ಯದಲ್ಲಿ ಕಲಾವಿದರು ರಂಗಭೂಮಿಯಲ್ಲಿ ಪ್ರದರ್ಶಿಸಿದರೆ ಪ್ರೇಕ್ಷಕರ ಇಂದ್ರಿಯಗಳಿಗೆ ಆನಂದ ಉಂಟಾದರೆ ನಾನು ರಚಿಸಿದ್ದಕ್ಕೆ ಪ್ರತಿಫಲವೂ ಸಾರ್ಥಕವೂ ಆದೀತು.

ಆರ್ಥಿಕ ಪ್ರತಿಫಲದ ಆಕಾಂಕ್ಷೆಇಲ್ಲದೆ ಕಲಾಮಾತೆಗೆ ಕಾಣಿಕೆಯಾಗಿ ಇತ್ತಿರುವ ಕೃತಿಗಳಲ್ಲಿ ತಪ್ಪುಗಳಿದ್ದರೆ ಹನ್ನೊಂದುತಿಂಗಳ ವಿದ್ಯಾಭ್ಯಾಸದ ಅಲ್ಪಮತಿಯಾದ ನನ್ನದೇ ಆಗಿರುತ್ತದೆ. ಪ್ರಾಜ್ಞರು ಅದನ್ನು ಒಪ್ಪಗೊಳಿಸಿ ಮನರಂಜನೆಯ ಕಾರ್ಯದಲ್ಲಿ ರಂಗಭೂಮಿಯಲ್ಲಿ ಬಳಸಿ ಪ್ರಸಾರ ಗೊಳಿಸುವರೆಂದು ನಂಬಿರುತ್ತೇನೆ.

ಈಕೃತಿಗಳನ್ನು ನೋಡಿ ಮುನ್ನುಡಿಯನ್ನು ಬರೆದು ವೇದಪೂರಿತ ಮಂತ್ರಾಕ್ಷತೆಯೊಂದಿಗೆ ಹರಸಿಕೊಟ್ಟ ಶ್ರೀಮದ್ರಾಮಚಂದ್ರಾಪುರದ ಮಠಸ್ತರಾದ ಜಗದ್ಗುರು ಶ್ರೀರಾಘವೇಂದ್ರಭಾರತಿಸ್ವಾಮಿಗಳವರಿಗೂ, ಕೃತಿಗಳಿಗೆ ಸಂಬಂಧಪಟ್ಟ ಚರಿತ್ರೆಗಳನ್ನುವದಗಿಸಿ ಕೊಟ್ಟ ಮಿತ್ರರಿಗೂ ಕೃತಿಗಳ ವಿಮರ್ಶೆಯಿಂದ ಅಭಿಪ್ರಾಯವನ್ನು ಸೂಚಿಸಿದ ಪ್ರಾಜ್ಞರಿಗೂ, ಕಲಾಭಿಮಾನಿಗಳಿಗೂ, ನನ್ನಹೃತ್ಪೂರ್ವಕವಾದ ವಂದನೆಗಳು.

ಈ ಕೃತಿಗಳನ್ನು ಅಚ್ಚುಕಟ್ಟಾಗಿ ಮುದ್ರಿಸಿಕೊಟ್ಟ ಜಾಣಪ್ರಿಂಟರ್ಸ್ ಮಾಲೀಕ ಮೊಮ್ಮಗ ಚಿ॥ ಬಿ. ಜೆ. ಪ್ರಕಾಶ್ ಮತ್ತುಕಾರ್ಯನಿರ್ವಾಹಕ ಮಂಡಳಿಯವರಿಗೆ ನನ್ನಆಶೀರ್ವಾದಗಳು.

ಬಾಲ್ಯದಲ್ಲಿ ಅಕ್ಷರಾಭ್ಯಾಸ ಮಾಡಿಸಿದ ಸದ್ಗುರುವಿನ ಕೃಪೆಯೂ, ಜನ್ಮದಾತರು ದೇವರಿಗೆ ಹಾಕಿದ ಸುಪುಷ್ಪದಫಲವು ಕೃತಿಗಳರಚನೆಗೆ ಕಾರಣವಾಗಿದ್ದು ಕಲಾಭಿಮಾನಿಗಳ ಪ್ರೋತ್ಸಾಹವು ಅನವರತವೂ ಲಭಿಸಲೆಂದು ಬೇಡಿಕೊಳ್ಳುವ ತಮ್ಮೆಲ್ಲರ ಆಶೀರ್ವಾದ ಅನುಗ್ರಹಾಕಾಂಕ್ಷಿ.

ಬೇಳೂರು ಜಾಣ ಮಂಜಪ್ಪ
ಮೊಕ್ಕಾಂ ಕೆರೇಕೊಪ್ಪ, ಉಳವಿ ಹೋಬಳಿ
ಅಂಚೆ–ನಿಸರಾಣಿ, ಸೊರಬ ತಾಲ್ಲೂಕು

॥ ಓಂ ॥



ಶ್ರೀ ಅಖಿಲ ಹವ್ಯಕ ಮಹಾಸಭಾ
ಹವ್ಯಕ ಗ್ರಂಥಾಲಯ
541
2
ಮಲ್ಲೇಶ್ವರಂ, ಬೆಂಗಳೂರು – 03

ಪ್ರಸೀದತು ರಾಮ ಚಂದ್ರಃ

ಶ್ರೀರಾಮ ॥ಶ್ರೀ॥ **ಗತ ಸಂಖ್ಯಾ ೧೮೮೫**

ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯವರ್ಯ ಪದವಾಕ್ಯ ಪ್ರಮಾಣ ಪಾರಾವಾರಪಾರೀಣ ಯಮ ನಿಯಮಾಸನ ಪ್ರಾಣಾಯಾಮ ಪ್ರತ್ಯಾಹಾರ ಧ್ಯಾನ ಧಾರಣ ಸಮಾಧ್ಯಷ್ಟಾಂಗ ಯೋಗಾನುಷ್ಠಾನ ನಿಷ್ಠ ಷಡ್ದರ್ಶನ ಸ್ಥಾಪನಾಚಾರ್ಯ ತಪಶ್ಚಕ್ರವರ್ತ್ಯನಾದ್ಯ ವಿಚ್ಛಿನ್ನ

ಶ್ರೀಮಜ್ಜಗದ್ಗುರು ಶಂಕರಾಚಾರ್ಯ ಶಿಷ್ಯ-

ಸುರೇಶ್ವರಾಚಾರ್ಯ– ಶ್ರೇಷ್ಠ ಶಿಷ್ಯ ವಿದ್ಯಾನಂದಾಚಾರ್ಯ ಗುರು ಪರಂಪರಾ ಪ್ರಾಪ್ತ ಸಕಲ ನಿಗಮಾಗಮ ಸಾರಹೃದಯ ಸಾಂಖ್ಯತ್ರಯ ಪ್ರತಿಪಾದಕ ವೈದಿಕ ಮಾರ್ಗಪ್ರವರ್ತಕ ಸರ್ವತಂತ್ರ ಸ್ವತಂತ್ರಾದಿ ಬಿರುದಾಂಕಿತ ವಿದ್ಯಾನಗರ ಮಹಾರಾಜಧಾನೀ ವೈಭವಸಿಂಹಾಸನಾಧೀಶ್ವರ, ವ್ಯಾಖ್ಯಾನ ಸಿಂಹಾಸನಾರೂಢ ಶ್ರೀಮದ್ರಾಜಾಧಿರಾಜ ಗುರು

ಶ್ರೀ ಗೋಕರ್ಣ ಮಂಡಲಾಚಾರ್ಯ

ಶ್ರೀಮಚ್ಛತಶೃಂಗ ಪುರವರಾಧೀಶ್ವರ ಶ್ರೀಮಚ್ಛರಾವತೀ ತೀರವಾಸ ಶ್ರೀಮದ್ರಾಮಚಂದ್ರಾಪುರಮಠಸ್ಥ ಶ್ರೀಮದ್ರಾಮಚಂದ್ರ ಚಂದ್ರ ಮೌಳೀಶ್ವರ ಪಾದ ಪದ್ಮಾರಾಧಕ ಶ್ರೀಮದ್ರಾಮಚಂದ್ರಭಾರತೀ ಶ್ರೀಗುರು ಕರಕಮಲ ಸಂಜಾತ

ಶ್ರೀ ಮದ್ರಾಘವೇಂದ್ರಭಾರತೀ ಶ್ರೀಸ್ವಾಮಿಭಿಃ।

॥ ಶ್ರೀಮನ್ನಾರಾಯಣ ಸ್ಮರಣ ಪುರಸ್ಸರಂ ಸಂದಿಶ್ಯೋಯಂ ಸಂದೇಶಃ ॥

ಅಸ್ಮದತ್ಯಂತ ಪ್ರಿಯ ಶಿಷ್ಯ ಸಾಗರ ಪ್ರಾಂತ್ಯ ಕ್ಯಾಸನೂರು ಸೀಮೆ ಕೆರೆಕೊಪ್ಪ ಗ್ರಾಮದ ಜಾಣ ಮಂಜಪ್ಪನವರಿಗೆ ಬರೆಸಿದ ಸಂದೇಶ.

ಅದಾಗಿ ನೀವು ಪ್ರಸಿದ್ಧ ಐತಿಹಾಸಿಕ ಕಥೆ ಚಾಣಕ್ಯ ತಂತ್ರವನ್ನು ಆರು ಖಂಡಗಳನ್ನಾಗಿ ಪರಿವರ್ಧಿಸಿ ಕರ್ನಾಟಕದ ಜನಪ್ರಿಯ ಕಲೆ ಯಕ್ಷಗಾನಕ್ಕೆ ಅಳವಡಿಸಿ ಬರೆದ ಕೃತಿಗಳನ್ನು ಅವಲೋಕಿಸಲಾಯಿತು. ಇವುಗಳು ಪ್ರಸಿದ್ಧ ಕವಿಗಳ ಕೃತಿಗೆ ಸರಿಮಿಗಿಲೆನಿಸಿವೆ. ಇವುಗಳನ್ನು ಯಕ್ಷಗಾನ ರಂಗದಲ್ಲಿ ಪ್ರಸಿದ್ಧ ಕಲಾವಿದರು ಆಡಿದಾಗ ಕನ್ನಡ ಜನತೆ ನಿರೀಕ್ಷಿಸಿ ನೀತಿ ಧರ್ಮಗಳ ರಹಸ್ಯವನ್ನು ಅರಿತು ಆಚರಿಸಿ ಭಾರತೀಯ ಸಂಸ್ಕೃತಿ ಪ್ರಯೋಜನವನ್ನು ಪಡೆಯುವಂತಾಗಲೆಂದೂ, ನಿಮ್ಮಿಂದ ಇದೇ ರೀತಿಯ

Scanned by CamScanner

ಉತ್ತಮ ಕೃತಿಗಳು ನಿರ್ಮಾಣಗೊಂಡು ಪ್ರಸಾರವಾಗಲೆಂದೂ, ಪ್ರಪ್ರಥಮವಾಗಿ ರಚಿತವಾದ ಈ ಕಥೆಯು ಯಕ್ಷಗಾನ ಕಲಾರಂಗದಲ್ಲಿ ವಿಶೇಷ ಪ್ರೋತ್ಸಾಹ ಭಾಜನವಾಗಲೆಂದೂ ಹಾರೈಸುತ್ತೇವೆ.

ಇತಿ ಶ್ರೀಮನ್ನಾರಾಯಣ ಸ್ಮೃತಯಃ

ಮಿತಿ-ಶ್ರೀಕಾಲಯುಕ್ತಿ ನಾಮ ಸಂ।ದ ಚೈತ್ರವದ್ಯ ೧೧ಯು ಬುಧವಾರ (ತಾ॥ 3-5-1978) ವಸತಿ-ಕ್ಯಾಸನೂರು ಶೀಮೆ ಬನದಕೊಪ್ಪ ಕಾಶ್ಯಿನ ಮಂಜಪ್ಪನವರ ಗೃಹೇ.

ಅಭಿಪ್ರಾಯ

ಯಕ್ಷಗಾನವು ಒಂದು ವಿಶಿಷ್ಟವಾದ ಸಾಹಿತ್ಯ ಪ್ರಕಾರ. ಇದು ಗದುಗಿನ ಭಾರತ ಮೊದಲಾದವುಗಳಂತೆ ಶ್ರವ್ಯವೂ ಹೌದು; ನಾಟಕಗಳಂತೆ ದೃಶ್ಯವೂ ಹೌದು. ವಿಭಿನ್ನವಾದ ಛಂದಸ್ಸು, ರಾಗ, ತಾಳಗಳ ಮೇಳನದಿಂದ ಇದರಲ್ಲಿ ಗಮಕ-ಸಂಗೀತಗಳ ಸಂಮಿಶ್ರಣವಿದೆ. ಪ್ರೌಢಕಾವ್ಯಗಳಾದ ಜೈಮಿನಿಭಾರತ ಮೊದಲಾದವುಗಳಂತೆ ವರ್ಣನಾ ವಿಶೇಷವನ್ನು ಜಾನಪದ ಸಾಹಿತ್ಯದ ಸರಳ ನಿರೂಪಣೆಗಳನ್ನೂ ಯಕ್ಷಗಾನದಲ್ಲಿ ಕಾಣಬಹುದು. ಕುಣಿತ, ಅಭಿನಯಗಳೂ ಸೇರಿ ಕಲಾವಿದರಿಗೂ, ರಸಿಕರಿಗೂ ಇದೊಂದು ಔತಣದ ತಾಣವಾಗಿದೆ. ಇಂತಹ ಒಂದು ಉತ್ತಮವಾದ ಕಲೆ ಕನ್ನಡ ನಾಡಿನಾಡಿನಲ್ಲಿಯೇ ಹುಟ್ಟಿ ಬೆಳೆಯಿತೆಂಬುದು ಕನ್ನಡಿಗರಿಗೆ ಹೆಮ್ಮೆಯ ವಿಷಯ. ಸಿನೀಮಾಗಳ ಹಾವಳಿಯಿಂದ ಸಂಗೀತ ನಾಟಕಗಳು ಕ್ಷೀಣವಾದವು. ನಶಿಸಿ ಹೋದವು ಎಂದರೂ ತಪ್ಪಿಲ್ಲ: ಆದರೆ ಯಕ್ಷಗಾನ ಕಲೆ ಈ ಹಾವಳಿಯಲ್ಲಿಯೂ ಅಳಿಯದೆ ಬೆಳೆಯುತ್ತಲೇ ಇದೆಯೆಂಬುದು ಸಂತಸದ ಸಂಗತಿ. ಗ್ರಾಮೀಣ ರಸಿಕರ ರಕ್ಷಣೆಯಲ್ಲಿ ಇದು ಭದ್ರವಾಗಿ ನಿಂತಿದೆ. ಹಾಡು, ತಾಳ, ಮದ್ದಲೆ, ವೇಷಕಟ್ಟು, ಕುಣಿತಗಳಲ್ಲಿ ಯಕ್ಷಗಾನವು ಎಲ್ಲಿಯವರಿಗೆ ಹಳೆಯ ಸಂಪ್ರದಾಯವನ್ನು ಬಿಗಿಯಾಗಿ ಹಿಡಿದಿರುತ್ತದೆಯೋ ಅಲ್ಲಿಯವರೆಗೆ ಇದಕ್ಕೆ ಚ್ಯುತಿಯಿಲ್ಲ. ಸುಧಾರಕರೆಂಬ ಹೆಸರಿನ ವಿದ್ಯಾವಂತರು ಯಕ್ಷಗಾನ ಕಲೆಯಲ್ಲಿ ಹಸ್ತಕ್ಷೇಪ ಮಾಡುವವರೆಗೆ ಇದು ನಿರ್ಬಾಧವಾಗಿ ಉಳಿದಿರುತ್ತದೆ.

ಯಕ್ಷಗಾನಕ್ಕೆ ಭಾಗವತರ ಆಟ, ದಶಾವತಾರದ ಆಟ ಎಂಬ ಹೆಸರೂ ಪ್ರಚಲಿತವಿದೆ. ಪೌರಾಣಿಕ ಕಥೆಗಳನ್ನು ಬಳಸುತ್ತಿದ್ದುದು ಇದಕ್ಕೆ ಕಾರಣ. ಹೊಸ ಹೊಸ ಯಕ್ಷಗಾನ ಪ್ರಸಂಗಗಳನ್ನು ಕವಿಗಳು ಬರೆದರೂ ಹಿಂದಿನ ಜಾಡಿನಿಂದ ಅವು ದೂರ ಹೋಗಿರಲಿಲ್ಲ. ಚಿರಪರಿಚಿತಕಥೆಗಳಲ್ಲಿ ಹೊಸ ಕೌತುಕಗಳು ಇಲ್ಲದ್ದರಿಂದ ಇವು ಕೆಲವು ವೇಳೆ ಸಪ್ಪೆಯಾಗುವುದುಂಟು. ಅರ್ಥಹೇಳತಕ್ಕವರ ಮತ್ತು ವೇಷಧಾರಿಗಳ ಅತಿಶಯವಾದ ನೈಪುಣ್ಯದಿಂದ ಮಾತ್ರ ಇವಕ್ಕೆ ಮೆರಗು ಬರುತ್ತದೆ. ಜನರ ಅಭಿರುಚಿ ಹೊಸದನ್ನು ಬಯಸುತ್ತಿರುತ್ತದೆ. ಈ ದೆಸೆಯಲ್ಲಿ ಶ್ರೀ ಜಾಣ ಮಂಜಪ್ಪನವರ ಪ್ರಯತ್ನ ಪ್ರಶಂಸನೀಯ. ಈಗಾಗಲೇ ಹೊಸ ಅಭಿರುಚಿಗೆ ತಕ್ಕ ಹಲವು ಕೃತಿಗಳನ್ನು ಅವರು ನಿರ್ಮಿಸಿಕೊಟ್ಟಿದ್ದಾರೆ. ಅವು ರಂಗಸ್ಥಳದ ಮೇಲೆ ಬಂದು ಕಲಾವಿದರಿಂದಲೂ, ಪ್ರೇಕ್ಷಕರಿಂದಲೂ, ಅಪಾರವಾದ ಮೆಚ್ಚಿಗೆಯನ್ನು ಗಳಿಸಿವೆ. ಶ್ರೀಯುತರು ಇನ್ನೂ ಮುಂದುವರಿದು ಐತಿಹಾಸಿಕವಾದ ಈ ಮೂರು ಪ್ರಸಂಗಗಳನ್ನು ಕನ್ನಡ ಕಲಾವಿದರಿಗೆ ಬಳುವಳಿಯಾಗಿ ನೀಡಿದ್ದಾರೆ.

ಚಾಣಕ್ಯ ಚಂದ್ರಗುಪ್ತರ ಚರಿತೆ ಇತಿಹಾಸ ಪ್ರಸಿದ್ಧವಾದದ್ದು. ಮಗಧ ರಾಜ್ಯವನ್ನಾಳುತ್ತಿದ್ದ ನಂದ ವಂಶೀಯರು ದುರುಳರಾಗಿದ್ದುದರಿಂದ ಚಾಣಕ್ಯನೆಂಬ ಚಾಣಾಕ್ಷನಾದ ಬ್ರಾಹ್ಮಣನು ಅವರನ್ನು ನಿರ್ಮೂಲಮಾಡಿ, ರಾಜ ವಂಶೀಯನೇ ಆದ ಚಂದ್ರಗುಪ್ತನನ್ನು ಪಟ್ಟಕ್ಕೆ ಏರಿಸಿದನು. ಅಸಾಧಾರಣ ಬುದ್ಧಿ ಶಾಲಿಯಾದ ಚಾಣಕ್ಯನ

Scanned by CamScanner

ಕುಟಿಲನೀತಿ ಸಕಲರನ್ನೂ ಬೆರಗುಗೊಳಿಸುತ್ತದೆ. ಅವನಿಗೆ ಕೌಟಿಲ್ಯನೆಂದೂ ಹೆಸರಿತ್ತು. ಕೌಟಿಲ್ಯನ ಅರ್ಥಶಾಸ್ತ್ರ ಎಂಬ ಗ್ರಂಥ ಪ್ರಸಿದ್ಧವಾಗಿದೆ. ಈ ಕಥೆಯನ್ನವಲಂಬಿಸಿ ಕನ್ನಡದಲ್ಲಿ 'ಮುದ್ರಾ ಮಂಜೂಷ' ಎಂಬ ಶ್ರೇಷ್ಠವಾದ ಕೃತಿ ರಚಿತವಾಗಿದೆ. ಶ್ರೀ ಜಾಣಮಂಜಪ್ಪನವರು ಇದನ್ನವಲಂಬಿಸಿ ಆರು ಯಕ್ಷಗಾನ ಪ್ರಸಂಗಗಳನ್ನು ರಚಿಸಿದ್ದಾರೆ. ಮೊದಲನೆಯ ಕಂತಾಗಿ ಮೂರು ಪ್ರಸಂಗಗಳನ್ನೂ ಇಲ್ಲಿ ಪ್ರಕಟಿಸಿದ್ದಾರೆ. ಈ ಮೂರನ್ನು ನಾನು ಓದಿ ನೋಡಿದ್ದೇನೆ.

ಶ್ರೀ ಜಾಣಮಂಜಪ್ಪನವರ ಕೈ ಪಳಗಿದ 'ಹಳೆಯಕೈ'. ಇದುವರೆಗೆ ನಾನಾ ಬಗೆಯ ಹಾಡುಗಳನ್ನೂ, ಮಂಗಳ ಗೀತಗಳನ್ನೂ, ಸ್ತೋತ್ರಗಳನ್ನೂ, ಕೀರ್ತನೆಗಳನ್ನೂ ಯಕ್ಷಗಾನಗಳನ್ನೂ ಅಸಂಖ್ಯಾತವಾಗಿ ಅವರು ರಚಿಸಿದ್ದಾರೆ. ರಸ ಭಾವಗಳನ್ನು ಕಲಾತ್ಮಕವಾಗಿ ವ್ಯಕ್ತಪಡಿಸುವ ಒಂದು ವಿಶಿಷ್ಟವಾದ ಕೌಶಲ ಅವರಿಗಿದೆ. ಇದೊಂದು ಸಂಸ್ಕಾರಬಲ; ದೈವಾನುಗ್ರಹ. ಆಯಾ ಸಂದರ್ಭಗಳಿಗೆ ತಕ್ಕಂತೆ ರಾಗ, ತಾಳಗಳನ್ನು ಬದಲಾಯಿಸಿ ಪದ್ಯಗಳನ್ನು ನೇಯುವುದರಲ್ಲಿಯೂ ಉಚಿತವಾದ ಸ್ಥಳದಲ್ಲಿ ಭಾಮಿನೀ, ವಾರ್ಧಿಕ ಷಟ್ಪದಿಗಳನ್ನು ಸೇರಿಸುವುದರಲ್ಲಿಯೂ ಉತ್ತಮ ನೈಪುಣ್ಯ ಇವುಗಳಲ್ಲಿ ಸ್ಪಷ್ಟವಾಗಿದೆ. ಈ ಪ್ರಸಂಗಗಳು ಎಲ್ಲ ಕಲಾವಿದರನ್ನೂ ಪ್ರೇಕ್ಷಕರನ್ನೂ ಮೆಚ್ಚಿಸುತ್ತವೆಯೆಂದು ನಂಬಿದ್ದೇನೆ. ರಂಗಸ್ಥಳದಲ್ಲಿ ಹೊಸದಾದ ಒಂದು ಕೌತುಕವನ್ನು ಇವು ಸಮರ್ಥವಾಗಿ ಕೆರಳಿಸಿ ಸಹೃದಯರನ್ನು ಆಕರ್ಷಿಸಬಲ್ಲ ಕೃತಿಗಳಿವು.

ಯಕ್ಷಗಾನವು ಹಳ್ಳಿಗಳಲ್ಲಿ ಹುಟ್ಟಿಬೆಳೆದ ಕಲೆ. ಇದರಲ್ಲಿ ಅರ್ಥದ ಗಂಭೀರತೆ, ರಸ, ಭಾವಗಳ ಅಭಿವ್ಯಕ್ತಿ ಮುಖ್ಯವೇ ಹೊರತು ಶಬ್ದ ರಚನೆಯಲ್ಲ. ಗ್ರಾಮ್ಯ ಶಬ್ದಗಳು ರಚನೆಯಲ್ಲಿ ಸೇರಿ ಕೊಂಡಿರುವುದು ಸಹಜ. ಭಾಷಾ ಶುದ್ಧತೆಯನ್ನು ಇಲ್ಲಿ ಅರಸಬಾರದು. ನಡುಗನ್ನಡದ ಒಂದು ಶೈಲಿ ಇದು. ಈ ಸಂಧಿ ಹೇಗೆ, ಈ ಶಬ್ದ ಹೇಗೆ ಎಂಬ ಪ್ರಶ್ನೆ ಏಳುವುದಿಲ್ಲ. ಜನರಲ್ಲಿ ಬಳಕೆಯಲ್ಲಿದ್ದಂತೆ ವಾಕ್ಯವು ರೂಪಗೊಳ್ಳುತ್ತದೆ. ಆದರೂ ಶ್ರೀ ಮಂಜಪ್ಪನವರು ಆಮಾತ್ಯ ಎಂಬ ಶಬ್ದದ ವಿಷಯವಾಗಿ ತಮ್ಮ ಕೊರಗನ್ನು ಹೇಳಿದರು. ಅದನ್ನು 'ಆಮಾತ್ಯ' ಎಂಬುದಾಗಿ ಬಳಸಬೇಕಾದ್ದು ಅನಿವಾರ್ಯವಾಯಿತೆಂದು ಅವರ ಚಿಂತೆ. ವಾಸ್ತವದಲ್ಲಿ ಈ ಚಿಂತೆಯೂ ಅನಾವಶ್ಯಕ. ಅಮಾತ್ಯ ಎಂಬುದು ಸಂಸ್ಕೃತ ಪದ. ಇದಕ್ಕೆ ಸ್ವಾರ್ಥಿಕವಾದ 'ಅಣ್' ಪ್ರತ್ಯಯವನ್ನು ಸೇರಿಸಿ 'ಆಮಾತ್ಯ' ಎಂಬ ರೂಪವನ್ನು ಸಿದ್ಧಗೊಳಿಸಬಹುದು. ಇದೇನೂ ಅಪಶಬ್ದವಲ್ಲ.

ಈ ಪುಸ್ತಕದ ವಿಷಯವಾಗಿ ನಾಲ್ಕು ಮಾತುಗಳನ್ನು ಬರೆಯಲು ನನಗೆ ತುಂಬ ಸಂತೋಷವಾಗಿದೆ. ಇದರಲ್ಲಿರುವ ಮೂರು ಪ್ರಸಂಗಗಳ ಸೊಗಸೇನೆಂಬುದನ್ನು ಸಾಹಿತಿಗಳು ಹೇಳಬೇಕು. ಕೈಗೆ ನೀಡಿರುವ ಹಣ್ಣಿನ ಸವಿಯನ್ನು ಬಾಯಿ ಹೇಳುತ್ತದೆ. ಆದಷ್ಟು ಬೇಗನೆ ಉಳಿದ ಮೂರು ಪ್ರಸಂಗಗಳೂ ಪ್ರಕಟವಾಗಿ ಚಾಣಕ್ಯಚಂದ್ರಗುಪ್ತರ ಕಥಾನಕ ಪೂರ್ಣವಾಗಲೆಂದು ಹಾರೈಸುತ್ತೇನೆ.

ಬೆಂಗಳೂರು,
೩೦–೧೦–೧೯೮೦

ವಿದ್ವಾನ್
ಎನ್. ರಂಗನಾಥ ಶರ್ಮಾ

ಯಕ್ಷಗಾನ

ಅಮಾತ್ಯ ರಾಕ್ಷಸನ ಭೇದೋಪಾಯ ಭಂಗ

Scanned by CamScanner

ಅಮಾತ್ಯ ರಾಕ್ಷಸನ ಬೇಧೋಪಾಯ ಭಂಗದಲ್ಲಿ ಪಾತ್ರಪರಿಚಯ

ಪರುವತೇಶ್ವರ	ಶಾಹುರೀಪುರದ ಸಾರ್ವಭೌಮ
ಮಲಯಕೇತು	" ಸಾರ್ವಭೌಮನ ಮಗ
ಶಬರವರ್ಮ, ಉಲೂಕ	" ಮಂತ್ರಿಗಳು
ಶೇಖರ	" ಸೇನಾ ನಾಯಕ
ಕಮಲಾ ಪೀಡ	ನಿಯೋಗಿ
ಹೂಣ, ಚೀಣ, ಕೈರಾತರು	" ಕಡೆ ಮಾಂಡಲಿಕ ಅರಸು
ಸರ್ವಾರ್ಥಸಿದ್ಧಿ ರಾಯ	ಪಾಟಲೀಪುರದಸಾರ್ವಭೌಮ
ಅಮಾತ್ಯರಾಕ್ಷಸ, ಸುಮತಿ	" ಮಂತ್ರಿಗಳು
ನವನಂದರು	" ಪಟ್ಟದರಾಣಿಯಮಕ್ಕಳು
ಚಂದ್ರಗುಪ್ತ	ಮೌರ್ಯನಮಗ
ಭಾಗುರಾಯಣ, ಭದ್ರಭಟ, ಗಿಂಡಿರಾತ	" ಸೇನಾನಾಯಕರು
ಕಲ್ಯಾಣಿ	" ನಂದನ ರಾಣಿ
ಕಾಂತಿ	" ವಿನಂದನ ರಾಣಿ
ವಿಷ್ಣುದಾಸ	" ನಿಯೋಗಿ
ಚಾಣಕ್ಯ	ಚಣಕಋಷಿಯ ಪುತ್ರ ದಂಡನೀತಿಯಶಾಸ್ತ್ರಕೋವಿದ
ಜೀವಸಿದ್ಧಿ, ಸಿದ್ಧಾರ್ಥ, ಮಾಸೋಪವಾಸಿ, ವೇಗಶರ್ಮ, ಸಮಿದ್ಧಾರ್ಥಕ, ಪುಲೋಮ	ಚಾಣಕ್ಯನ ಕಡೆ ಗೂಢಾಚಾರ್ಯರರು
ಸೂರ್ಯವರ್ಮ	ಕಾಮರೂಪ ದೇಶದದೊರೆ
ಕಾಶೀರಾಜ	ಕಾಶೀ ದೇಶದದೊರೆ
ಚಾರಕರು	
ಮಾಂಡಲಿಕ ಅರಸರು	

ಓಂ

ಯಕ್ಷಗಾನ

ಅಮಾತ್ಯ ರಾಕ್ಷಸನ ಭೇದೋಪಾಯಭಂಗ

ಶಾರ್ದೂಲ ವಿಕ್ರೀಡಿತವೃತ್ತ

ಗೌರೀಶಂ ಸುರಪೂಜೀತಂ ಭಯಹರಂ ಸರ್ವಾರ್ಥ ಸಿದ್ಧಿಪ್ರದಂ । ಮಾರಾರಿಂ ಶಶಿಶೇಖರಂ ತ್ರಿನಯನಂ ದಾರಿದ್ರಸಂಹಾರಿಣಂ। ಭಾರ್ಯಾರ್ಧಾಂಗ ವಿಭೂತಿಲೇಪನ ವಿಭುಂ ಚರ್ಮಾಂಬರಂ ಧೂರ್ಜಟಿಂ। ಕಾರುಣ್ಯಾಂಬುಧಿ ನೀಲಕಂಠಮಮಲಂ ವಂದೇ ಹರಂ ಶಂಕರಂ ||೧||

ರಾಗನಾಟಿ ಅಷ್ಟತಾಳ

ಜಯತುಜಯ ಕರಿಮುಖನೇ। ಜಯತುಜಯ ಸುರನುತನೇ। ಜಯತುಜಯ ಗಣನಾಥ। ಜಯತು ಶಿವಜಾತ। ಜಯತು ಜಯ ಜಯತು ||೧|| ಆದಿಯೊಳು ನುತಿಸುತಲಿ। ಮೋದಕವ ನರ್ಪಿಸುವೆ॥ ಭೇದವಿಡ ದೀಕೃತಿಗೆ। ನೀದಯವತೋರೈ। ಜಯತು ಜಯ ಜಯತೂ ||೨|| ಕೆರೆಯಕೊಪ್ಪದೊ ಳ್ನಿಲಸೀ ದುರಿತವನೆ ಪರಿಹರಿಸಿ। ಕರುಣವಿರಿಸೀಕೃತಿಗೆ। ಹರುಷಗೊಳಿಸೆನಗೆ॥ ಜಯತು ಜಯ ಜಯತು ||೩||

ಭಾಮಿನಿ

ಕಮಲಜನಸತಿ ಶಾರದಾಂಬೆಯೆ। ರಮೆಯೆ ಪರುವತರಾಜ ಕುವರಿಯೆ। ನಮಿಪೆ ನೀ ಕೃತಿಗೈಯ್ಯೆ ಮತಿಇತ್ತೆನಗೆ ಅನವರತಾ॥ ಕ್ರಮಕೆಬಾಧಕ ವಿಲ್ಲದಂದದಿ। ಗಮಕಿಗಳಿಗತಿ ಸುಲಭವಾಗಲು। ವಿಮಲ ಶಬ್ಧವ ನೊದಗಿಸಿರಿ ಕೃಪೆಮಾಡಿ ದೇವಿಯರೆ ||೧||

ದ್ವಿಪದಿ

ಗುರುರಾಘವೇಂದ್ರ ಭಾರತಿಯರನು ಸ್ತುತಿಸೀ। ವರಕವಿಗಳೆಲ್ಲರನು ಮನದೊಳಗೆ ಸ್ಮರಿಸೀ||೧|| ಆದಿಕವಿ ವಾಲ್ಮೀಕಿ ಗಭಿನಮಿಸಿ ಮನದೀ॥ ಸಾಧು ಸಂಸ್ಕೃತರುಗಳ ಧ್ಯಾನಿಸುತ ದಿನದೀ॥೨॥ ಜನನಿ ಜನಕರ ಪಾದ ಪಂಕಜವ ಭಜಿಸೀ॥ ಚಿನುಮಯಾತ್ಮಕ ಕೃಷ್ಣಮೂರ್ತಿ ಗಭಿನಮಿಸೀ||೩|| ಕಲಿಯುಗದಿ ನಡೆದೀರ್ಪ ಕಥೆಯೊಂದ ನಿದನೂ॥

Scanned by CamScanner

ಕಲೆಗೆ ಕಾಣಿಕೆ ಈಯ ಲೋಸುಗವೆ ನಾನು ॥೪॥ ಯಕ್ಷಗಾನಕೆ ಯೋಗ್ಯಮಪ್ಪಂತೆ ರಚಿಸೀ॥ ದಕ್ಷ ಕಲೆಗಾರರಿಗೆ ಶಿರಬಾಗಿ ಕಳಿಸೀ ॥೫॥ ರಂಗಭೂಮಿಗೆ ತಂದು ಜನಮ ನವತಣಿಸೀ ॥ ರೆಂದುಬೇಡುವನೆಂಬ ಬಯಕೆಯನುಸರಿಸೀ ॥೬॥ ಹಿಂದೆಬರೆದಿಹ ಚಂದ್ರ ಗುಪ್ತನಾ ಕಥೆಯಾ॥ ಬಂಧ ಪರಿಹರವಾದ ಮೇಲೆ ಮುಂಗಥೆಯಾ ॥೭॥ ಇಂದು ಬರೆಯುವೆ ನಿದಕೆ ಪ್ರೋತ್ಸಾಹ ನೀಡಿ॥ ಕುಂದುಕೊರತೆಗಳಿರಲಿ ಕದನು ಹೋಗಾಡಿ ॥೮॥ ತಿದ್ದಿ ಮೆರಸಲಿ ಜನರು ಮನದ ರಂಜನೆಗೆ॥ ಬುದ್ಧಿವಂತರುನಟಿಸಿ ತೋರಲೀಧರೆಗೆ ॥೯॥

ಭಾಮಿನಿ

ಹರಿಜನೀ ಹರಿಕುಲದಿ ಜನಿಸುತ। ಹರಿಗೆಮಂತ್ರಿತ್ವವನೆ ಎಸಗುತ। ಹರಿಯ ದರ್ಶನಗೈದು ಹರಿಸಖ್ಯವನೆ ಸಂಘಟಿಸೀ॥ ಹರಿಯುಶರದಿಂ ಹರಿಯುವಧಿಸಲು। ಹರಿನಿ ರೂಪದಿ ಹರಿಯಲಂಘಿಸಿ। ಹರಿಯರಸಿ ಗುಂಗುರವನಿತ್ತಿಹ। ಹರಿಗೆವಂಧಿಪೆನು ॥೧॥

ರಾಗ ಸೌರಾಷ್ಟ್ರತ್ರಿವುಡೆ

ದುಷ್ಟಬುದ್ಧಿಗಳಿಂದ ನಂದರು। ಶ್ರೇಷ್ಟರಾಗಿಹ ಮೌರ್ಯವಧೆಯನು। ಗುಟ್ಟಿನಿಂದುಪ ವನದಿಗೈದಿರಲಾಗಲುಳಿದಾ ॥೧॥ ಚಂದ್ರಗುಪ್ತನ ಬಂಧನದೊಳಡೆ। ಒಂದು ಕಾಲದಿಪ ರ್ವತೇಶನು। ನಂದರಾಜ್ಯಕೆಕಳುಹೆಕೃತ್ರಿಮ ಶಿಲ್ಪದಿಂದ ॥೨॥ ಅಂದುಹರಿಪಂಜರವ ಭೇದಿಸೆ।ಚಂದ್ರಗುಪ್ತನ ಬುಧರಛತ್ರದೊ। ಳೊಂದುಅಧಿಕಾರವನು ನೇಮಿಸುತಿಡಲಿಕಾಗ ॥೩॥ ನಂದರನು ಸಂಹರಿಪಕಾರ್ಯಕೆ। ಬಂದಿರುವ ಚಾಣಾಕ್ಯಸಖ್ಯತೆ। ಇಂದಪರುವತ ರಾಜನಲ್ಲಿಗೆ ತೆರಳಿಬಳಿಕ ॥೪॥ ಭೇದದೊಳು ಅಮಾತ್ಯರಾಕ್ಷಸ। ಗೈದಕೃತ್ರಿಮಗಳನು ತಿಳಿಯುತ। ಭೇದಿಸಿದ ಚಾಣಿಕ್ಯತಂತ್ರಗಳೆಂಬಕಥೆಯೊ ॥೫॥ ಧರೆಯಜನರರಿವಂತೆ ಬರೆಯುವೆ। ವರಕಥಾ ಸಾರವನು ಸೂಕ್ಷ್ಮದಿ। ಚುರುಕು ಬುದ್ಧಿಗಳಿದನು। ಗಮನಿಸದಿರರು ಜಗದಿ ॥೬॥

ವಾರ್ಧಿಕ

ಅರುಣನುದಯದಿ ಪರ್ವತೇಶ್ವರನು ಶಯ್ಯೆಯಿಂ। ದಿರದೆದ್ದು ಸ್ನಾನಾದಿ ನಿತ್ಯಕರ್ಮವನೆಸಗಿ। ತರಣಿಗರ್ಘ್ಯೆಯನಿತ್ತು ದಿವ್ಯಾಂಬರಾಭರಣ ಗಳನೆತಾ ನಳವಡಿಸುತಾ॥ ಭರಿತವೈಭವದಿಂದ ತೆರಳಬರೆವಿಪ್ರತತಿ। ಕರದಮಂತಾಕ್ಷತೆಯ ತಳಿದು ಆಶಿಷಗೈಯ್ಯೆ। ನಿರುಕಿಸುತಸಭೆಗೆ ವಂದಿಸೆನೃಪತಿ ಜಯವೆಂದು ಪೊಗಳೆಮಾಗಧನಿಕರವೂ ॥೧॥

ರಾಗ ಭೈರವಿ ಝಂಪೆ

ಬಂದುಸಿಂಹಾಸನದಿ ವಿಷ್ಟರಿಸು ತಿರಲಾಗ। ತಂದುಕಪ್ಪವನಿತ್ತು ಮಕುಟವನೆ ಚಾಚಿ॥ ವಂದಿಸುತ ನೃಪರು ಕೈಜೋಡಿಸಲಿ ಕವರುಗಳ। ಚಂದದಿಂಕ್ಷೇಮವನೆ ಬೆಸ

ಗೊಂಡನಾಗ ॥೧॥ ಮಂತ್ರಿಪ್ರಮುಖರುಗಳ ಸಾಂತ್ವವಚನದಿಕರೆದು। ಅಂತಸ್ತ ಕನುಸರಿಸಿ ಮಂಡಿಸಲುಪೇಳಿ॥ ಸಂತಸದಿ ಪುರಜನರ ಪರಿವಾರದವರನಾ। ದ್ಯಾಂತಕುಶಲವ ಕೇಳುತಾಗ ॥೨॥ ಲಾಲಿಸುಮಂತ್ರಿಸು ಶೀಲಶಬರವರ್ಮ। ಪಾಲಿಸುತ ಪ್ರಜೆಗಳನು। ಲೀಲೆಇಂದಿರಲು॥ ಕಾಲಗತಿಯಿಂದಬಂದೊದಗಿಹುದು ನಮಗೀಗ। ಖೂಳಗಿರಿವರ್ಮತಾ। ಪಾಳಯವಕೂಡಿ ॥೩॥ ಪುರವ ಮುತ್ತುವನೆಂಬ ವಾರ್ತೆಯನು ನಾವ್‌ಕೇಳಿ। ಪರಿಯ ತಿಳಿಯುತ ಬರಲು। ಚರನ ಅಟ್ಟಿರಲು॥ ಅರಿಗಳವನನುನೋಡಿ ಶರೆಯನಿಕ್ಕಿದರೇನು। ಬರಲಿಲ್ಲವೀವರೆಗು। ಕುರುಹ ನರಿತವನು ॥೪॥

ರಾಗ ಕೇದಾರಗೌಳ ಅಷ್ಟತಾಳ

(ಶಬರವರ್ಮ) ದೊರೆಯೆ ಚಿಂತಿಪುದೇಕೆ। ಅರಿಗಳ ಭಯಬೇಡ। ತೆರಳಿದ ಚಾರಕನು॥ ಅರಿತು ಗುಪ್ತದೊಳೆಲ್ಲ ತಿರುಗಿಸಂಗ್ರಹಿಸಲು। ಇರುಳು ಹಗಲು ವಾರದಿ॥೧॥ಚರಿಸಿದಲ್ಲದೆ ಇರ್ಪ ದೊರೆಗಳ ಧ್ವಜನಿಯ। ಗುರತನು ತಿಳಿವುದೆಂತೂ॥ ಅರಸರೆ ಚಾಣಿಕ್ಯ ಚಂದ್ರಗುಪ್ತರುನಿನ್ನೆ। ಅರುಹಿದ ಪರಿಗೇನೆಂಬೆ ॥೨॥
(ಪರುವತರಾಜ) ವೃದ್ಧಮಂತ್ರಿಗಳು ವುಲೂಕ ರೊಳಗೆನಾವು। ಸದ್ಯದ ಪರಿಸ್ಥಿತಿಯಾ॥ ಮರ್ಧಿಸಿ ನಿಶ್ಚಯ ಗೈಯ್ಯಬೇಕವರೀಗ। ಇದ್ದಲ್ಲೆ ಇರಬೇಕೆಂದ ॥೩॥
(ಉಲೂಕ) ಕುಸುಮ ಪುರದ ಅರಸುಗಳಿಗು ನಮಗಿನ್ನು। ಕಸಿವಿಸಿ ಯಾದುದಿಲ್ಲಾ॥ ದೆಸೆಗೆಟ್ಟ ಚಂದ್ರಗುಪ್ತನ ದೆಸೆಇಂದಲಿ। ಬೆಸುಗೆಯು ಬಿಡುವುದೆಂದ ॥೪॥ ಲಾಲಿಸಿಪರ್ವತ ರಾಯನುಪೇಳಿದ। ಖೂಳನಂದರು ಮೌರ್ಯರಾ॥ ಆಲಯದೊಳುಕೂಡಿ ಶತಜನರನು ಕೊಂದ। ಮೇಲೀತ ಕ್ಷೋಸುವರೂ ॥೫॥
(ಶೇಖರ) ನಂದರು ಜ್ಞಾತಿಮತ್ಸರದಿಂದ ಲವರನ್ನು। ಕೊಂದರೆನ್ನಲುಶೇಖರ॥ ಇಂದ ವರಿಗೆಬಹು ದೇಶದದೊರೆಗಳು। ಹೊಂದಿಕೊಂಡಿಹರೆಂದನು ॥೬॥ ಶಬರವರ್ಮನುಪೇಳ್ದ ಚಂದ್ರಗುಪ್ತನಿಗೀಗ। ಅಭಯವ ನಿತ್ತಿಹರು॥ ಪ್ರಭುಗಳಮಾತೀಗ ಹುಸಿದರೆ ಕೋಪಿಸಿ। ವಿಭುದನೇಂಗೈಯ್ಯುವನೊ ॥೭॥

ರಾಗ ಬೇಗಡೆ ಅಷ್ಟತಾಳ

(ಪರುವತ) ಚಂದ್ರಗುಪ್ತನು ಅರ್ಧರಾಜ್ಯವನೂ। ಬೇಡುವನೊಮತ್ತಾ। ನಂದರನು ಸಂಹರಿಸ ಲ್ಪೋಳುವನೋ॥ ಬಂದಿರುವ ಚಾಣಿಕ್ಯನಭಿಮತ। ದಿಂದಲೆರಡನು ಬಯಸಿದಂತಿದೆ। ಮುಂದೆನಂದರ ಭಾಗನಮಗಹು। ದೆಂದುಪೇಳಿದ ಪರ್ವತೇಶನು ॥೧॥ ಇರುವನೈ ಅಮಾತ್ಯ ರಾಕ್ಷಸನೂ। ಬಹುಚತುರನಾಗಿಹ। ದೊರಕಿಸನು ನಮ ಗರ್ಧರಾಜವನೂ॥ ಬರಿದೆ ಸೇನೆಯ ಕಳೆದುಕೊಂಬರೆ। ಅರಿತುಮಾಡುವು ದುಚಿತವಲ್ಲವೆ। ಮರೆವುದೇಉಪಕೃತಿಯಪಿಂದಿನ। ಅರುಹುದೊರೆನೀ ನೆನೆಉಲೂಕನು ॥೨॥
(ಪರುವತ) ನೀತಿಬಾಹಿರನಲ್ಲನಾಮಾತ್ಯಾ। ಆಚಂದ್ರಗುಪ್ತನ। ಪ್ರೀತಿಸುವರೈ ಸಚಿವ

Scanned by CamScanner

ರಾಶವತ್ತಾ|| ನೈತಿಕದ ಮಾರ್ಗವನುಪಿಡಿದೇ| ಖ್ಯಾತರಾಗಿಹ ಸೇನೆನಾಯ್ಕಕ ರೀತಿ ಯರ್ಥದಿ ಸಮ್ಮತಿಯನಿವ| ಗೀತೆರದಿ ಬರದಿಹರುನೋಡೆನೆ ||೩|| ದೊರೆಯಕರದಿಂ ಪತ್ರವನೆಕೊಳುತಾ| ಉಲೂಕವಾಚಿಸೆ| ಕರುಣಿಪುದುಈ ಮೌರ್ಯಕನಪುತ್ರಾ|| ಅರುಹುವುದು ನಮ್ಮರ್ಥವೆಂದೇ| ಅರಿತುಈತನ ಕಾರ್ಯಭಾಗದಿ| ತ್ವರೆಯೊಳ್ಪೂರೈಸಲು ಯಸಸ್ಕರ| ಬರುವುದಲ್ಲದೆ ಪುಣ್ಯಬಪ್ಪುದು ||೪||

ವಾರ್ಧಿಕ

ಎನುತಲಾಭದ್ರಭಟ ಮೊದಲಾದನಾಯಕರು| ಮನವಪ್ಪಿ ಸಮ್ಮತಿಯನಿತ್ತು ಹಸ್ತಾಕ್ಷರದಿ ಸನುಮತದ ಸಾಕ್ಷಿಯಂ ನಿತ್ತುದಂ ನೋಡುತಾ ಸಚಿವಬೆರಗಾಗುತಾ|| ಜನಪನೊಳು ಪೇಳ್ದನೀ ಚಂದ್ರಗುಪ್ತನುಕ್ಷಾತ್ರ|ವನಿತೆ ಪುತ್ರಕನಲ್ಲ|ವೆನಿತ್ತೊಪ್ಪುವರೊ ಪ್ರಜೆಗ| ಳೆನೆಶಬರವರ್ಮತಾ| ಖಿನಿಸಿನೊ ಉಲೂಕನೊಳುವರದತನ್ನಭಿಮತವನು ||೧||

ರಾಗ ಕೇದಾರಗೌಳ ಅಷ್ಟತಾಳ

(ಶಬರವರ್ಮ) ಅಚ್ಚಕ್ಷತ್ರಿಯರೀಗೆ ಕಲಿಯುಗದೊಳಗಿಲ್ಲ| ಉಚ್ಚ ಸಾಂಬ್ರಾಜ್ಯಗಳೂ|| ತುಚ್ಛಕುಲಜನನ್ನೆಆರಿಸಿಪ್ರಜೆಗಳು| ಮೆಚ್ಚುಗೆ ನೀಯುವರು ||೧|| ಗುಣಮುಖ್ಯವಲ್ಲದೆ ಕುಲ ಮುಖ್ಯವಲ್ಲವು| ಗುಣಹೀನ ನಂದರಿಗೇ|| ಕ್ಷಣಿಸಿ ಆಯುಷ್ಯವು| ಫಣಗೈದ ಚಾಣಿಕ್ಯ| ನಣಿಯಾಗಿ ನಿಂತಿಹನೂ ||೨||

(ಉಲೂಕ) ಪಿಂದೆದಶಾರ್ಣವ ಶೂರಸೇನಾದ್ಯರೊಳ್| ಬಂದಿಹಕಲಹವನು|| ಅಂದು ಅಮಾತ್ಯನು ಪರಿಹಾರಗೈದಿಹ| ನೆಂದುಯೋಚಿಸಲುನಾವು ||೩|| ನಂದರಭೃತ್ಯನು ಅಮಾತ್ಯರಾಕ್ಷಸ| ನೆಂದೂಬಿಡನುಅವರಾ|| ಹಿಂದೆಯೆ ವಚನವ ಕೊಟ್ಟಹನೆಂಬರು ಒಂದುಕಾಲದಿ ತಂದೆಗೆ ||೪||

(ಶಬರವರ್ಮ) ಬರುವ ಲಾಭವನಾವು ಪಡೆಯಬೇಕಲ್ಲದೆ| ದುರುಳನಂದರ ಬಿಡದೂ|| ಶರಣುಬಂದಿಹ ಚಂದ್ರಗುಪ್ತನ ಬಿಡುವುದು| ತರವಲ್ಲವೆಂದರುಹೆ ||೫||

ರಾಗ ಝಂಜೂಟಿ ಅಷ್ಟತಾಳ

ದೊರೆಯುಚಾರಕನೊಳು ಅರುಹಿದ | ಈಗತೆರಳುತ್ತಉಪವನ ದೊಳಗಿರ್ದ|| ಅರಸುಕುಮಾರನ ಚಾಣಿಕ್ಯನೆಂಬರ| ಅರಿತುಸಮಯವ ಬಾರೆನುತ್ತಲಿ| ಭರದೊಳಟ್ಟೆ ಹರೆಂದು ಪೇಳ್ವುದು ||೧|| ವಂದಿಸಿಪೊರಟ ಚಾರಕನೂ| ವೇಗ| ದಿಂದಲಿ ಉಪವನಕ ವನೂ|| ಚಂದ್ರಗುಪ್ತನ ಚಾಣಾಕ್ಯರನೆ ಕಾಣುತಲಿಭೂ| ಮೀಂದ್ರ ಸಮಯವ ನರಿತುಬಾಯನೆ| ಬಂದಿತಾನೆಂದೆನುತ ಮಣಿಯಲು ||೨|| ಅರಸನೆಬಳಿಗೆ ನಾವೀಗ| ಬಹು| ತೊರೆಯೊಳು ಬಹೆವೆನಲಾಗ|| ಅರುಹುನೀನವರಿಗೆನ್ನುತಪೇಳೆ ಚಾಣಿಕ್ಯ| ಚರನುತಪಕದಿ ಬಂದುಪೇಳಿದ| ದೊರೆಗೆ ಅವರುತ್ತರವ ನಾಗಳು ||೩||

ರಾಗ ಸಾಂಗತ್ಯ ರೂಪಕ ತಾಳ

ಧರಣಿಪಾಲಕನೆದ್ದು ಅರಮನೆದ್ವಾರದಿ| ಹೊರಗಡೆ ಗೈತಂದುಇರಲು|| ದೊರೆಕುಮಾರನಕೂಡಿ ಚಾಣಾಕ್ಯ ದೂರದಿ| ಬರುತಿಹುದನು ಕಂಡುನುಡಿದ ||೧|| ನಾನೇ ಸನ್ನಿಧಿಯತ್ತ ಬರಲೆಳಸುತಲಿರ್ದೆ| ಜ್ಞಾನವಂತರೆ ಬಂದಿರೀಗ|| ಆನತನಾಗಿಹೆ ಪಾದದಿ ತವಕೃಪೆ| ಈನರಾಧಿಪನಮೇಲಿರಲೀ ||೨|| ಚಾಣಿಕ್ಯನಾಗಕೈಎತ್ತಿ ಭೂಮಿಪನಿಗೆ| ಸ್ಥಾಣುರಕ್ಷಿಪನ್ನೆಯ್ಯ ನಿನ್ನ|| ಮಾನನಿಧಿಯೆ ಎನ್ನ ಪ್ರಕೃತದೊಳ್ಬಯಸಿದು| ದೇನು ಕಾರಣ ವೆಂದುಪೇಳ್ಳೈ ||೩|| ಧರಣಿಪ ನೊಳಯಿಂಕೆ ಕರತರು ತವರನ್ನು ಹರಿಯವಿಷ್ಟರದಿ ಕುಳ್ಳಿರಿಸೀ|| ಚರಣಧೂಳಿಯ ಮುಡಿಯುತ್ತ ವಿರಕ್ತನೊ| ಳರುಹಿದನಾಗ ಸಂತಸದಿ ||೪|| ಧನ್ಯನಾದೆನುತವ ಪಾದದರ್ಶನದಿಂದ| ನಿನ್ನೆತಾವ್ ಬಂದಕಾಲದೊಳು|| ಯನ್ನಕಾರ್ಯದದೆಸೆ ಇಂದಪೂರೈಸದೆ| ಇನ್ನುಳಿದಿರುವ ಶೇಷವನು ||೫|| ಈದಿನನಿಮ್ಮೊಳ್ವಿಮರ್ಶೆಯ ಗೈಯ್ಯಲು| ಸಾಧುಪುಂಗವನೇ ನಾಬರಲು|| ಆದಿಯೊಳ್ಸಮಯವ ಕೇಳಿ ಬಾರೆನುತಲೆ| ಪಾದದೆಡೆಗೆ ಕಳುಹಿದೆನು ||೬|| ಚಂದ್ರಗುಪ್ತನು ನಿಮ್ಮ ಆಶ್ರಯವನು ಪೊಂದಿ| ಬಂದೆಷ್ಟು ದಿನಗಳಾಗಿಹುದು|| ನಂದರರಾಜ್ಯದೊ ಳರ್ಧಭಾಗವುಆತ| ಗಿಂದು ಸಿಕ್ಕಿದರೆ ಸಾಕೆನುತಾ ||೭|| ನಿಮ್ಮ ಪ್ರಾರ್ಥಿಸಿದನೆ ಇದಕೆಸಮ್ಮತಿಸಿದ| ಡೆಮ್ಮನು ಬಯಸಿದುದ್ಯಾಕೆ|| ವಮ್ಮತಪಡುತರ್ಧ ರಾಜ್ಯವ ನಂದರು| ಸುಮ್ಮನೆ ಕೊಡುವರೆ ಪೇಳಿ ||೮||

ರಾಗ ಸುರಟಿ ಏಕತಾಳ

(ಚಾಣಿಕ್ಯ) ಎನ್ನನುನೃಪಸುತನೂ| ಸೇರಿಹ| ಮುನ್ನಿನ ಕಥನವನೂ|| ಜನ್ಮದಿಗಜಸಿಂಹದದ್ವೇಷಗಳನು| ದುರ್ನಡತೆಯು ನಂದರುಕೈಕೊಂಡರು ||೧|| ಹೃದಯದ ದ್ವೇಷವನೂ| ತೊಳೆಯಲು| ವದಗಿಹೆ ತಮಗಿನ್ನೂ| ವಿದಿತವಮಾಡಲು ಬೇಕೆನುತವಸ| ನ್ನಿಧಿಯೊಳಗರುಹುವೆ ನಂದರದುಷ್ಕೃತಿ ||೨|| ನಂದರಸತ್ರದಲೀ| ಹಸಿವನು| ಹೊಂದಿಹ ವಡಲಲ್ಲೀ|| ಬಂದೊಂದೆಡೆಯೊಳು ಕುಳಿತಿರೆಯನ್ನೊಳು| ಕುಂದನು ಎಣಿಸುತ| ನಿಂದಿಸಿ ಎಳೆಸಲು ||೩|| ಘಾಸಿಗೊಂಡೆನವರಾ| ಎಳೆತಕೆ| ಸೂಸಿರೆಶಿಖಿಉದುರಾ|| ಭೂಸುರಸ್ತೋಮದಿ ಎನಗಪಮಾನವ| ಆಸುರಿತನದೊಳು ಗೈದಿಹರಲ್ಲದೆ ||೪|| ಕತ್ತಿಗೆಕೈಇಡುತಾ| ದೂಡಿರೆ| ನುತ್ತಲಿ ಘರ್ಜಿಸುತಾ|| ಸುತ್ತರಿಯುತ ಭಟರುಗಳಿಗೆ ಪೇಳಲು| ನೆತ್ತಿಯ ಜುಟ್ಟೆಯು ಬಿಚ್ಚುವಂತೆಳದರು ||೫||

ರಾಗ ಕೇದಾರಗೌಳ ಝಂಪೆ

(ಪರುವತ) ಸುಮ್ಮನೇಬಂದಿರುವಿರೇ| ಪಾಪಿಗಳ| ನಿರ್ಮೂಲ ಗೈಯ್ಯದಿಹಿರೇ|| ನಿಮ್ಮ ತಪಃಶಕ್ತಿಯನ್ನೂ| ತೋರಿಸದೆ| ನಮ್ಮಬಳಿ ಬಂದಿರೇನು ||೧||

Scanned by CamScanner

(ಚಾಣಿಕ್ಯ) ಏರಿಬರೆ ಕೋಪವೆನಗೇ| ನಂದರಿಗೆ| ಸಾರಿಬಂದೆನು ಬಾಹ್ಯೆಗೇ|| ಕ್ರೂರಿ ಗಳೆನಿಮ್ಮ ಕೊಂದೂ| ಮಮಶಿಖೆಯ| ಓರಂತೆ ಕಟ್ವೆನೆಂದೂ ||೨||
(ಪರುವತ) ತಪಸಿಗಳು ಕೋಪಿಸುವರೇ| ಜಗದಜನ| ಅಪಹಾಸ್ಯ ಗೈಯ್ಯ ದಿಹರೇ|| ಸುಫಲಸಿಗುವುದೆ ಜ್ಞಾನಿಯೂ| ಕೋಪಿಸಲು| ವಿಫಲವಾಗದೆ ಮುಕುತಿಯೂ ||೩||

ಭಾಮಿನಿ

(ಚಾಣಿಕ್ಯ) ಕೋಪವೂ ಲೌಕಿಕದ ಕಾರ್ಯಕೆ| ತಾಪವಾಗದು ಸಾಧನವು ದೊರೆ| ಕೋಪವಿಲ್ಲದಮನುಜ ಹೆಂಗುರಿಯಾಗಿ ಕಾಣುವನೂ|| ಕೋಪದ್ವಯದಿ ವಿಮರ್ಶೆ ಪೂರ್ವಕ ಕೋಪವೆಸಗೆ ನಿರರ್ಥವಲ್ಲವು| ಕೋಪವೆಸಗಿ ವಿಮರ್ಶೆಗೈದರೆ ಹಾನಿಕರ ವೆನಲು ||೧||

ರಾಗ ಬೇಗಡೆ ಅಷ್ಟತಾಳ

(ಪರುವತ) ಅರಿತವರು ಕೋಪಿಸಲು ಪರಗತಿಗೇ| ಪ್ರತ್ಯವಾಯವು| ಬರುವುದೆಂಬರು ನೀತಿವಂತರಿಗೇ|| ತರವಿದಲ್ಲವು ಕೋಪದಿಂದಲಿ| ಅರಿವು ತಪ್ಪುವುದೆಂಬರಲ್ಲದೆ| ದುರಿತ ದುಃಖದಿ ಬಳಲಿಕಡೆಯಲಿ| ನರಕಕ್ಕೈದುವ ರೆಂಬರಲ್ಲವೆ ||೧||
(ಚಾಣಿಕ್ಯ) ಧರಣಿಪಾಲಕಕೇಳು ಪೇಳುವೆನೂ| ಶ್ರೀರಾಮ ರಾವಣ| ರೆರಡುಜನರಾ ಕೋಪಸ್ಥಿತಿಗಳನೂ|| ಪರಿಕಿಸಲು ಉದಹರಣೆಯಾಗಿದೆ| ಬರಿದೆಕೋಪಿಸಲಿಲ್ಲ ವವರಲಿ| ಬರುವವಿಷಯ ವಿಮರ್ಶೆ ಇಂದಲಿ| ದುರುಳರೊಳು ಕೋಪವನುಎಸಗಿದೆ ||೨||
(ಪರುವತ) ಶಾಪವಿತ್ತವರನ್ನು ಧ್ವಂಸಿಸದೇ| ಬರಲೇನು ಕಾರಣ| ತಾಪಸೋತ್ತಮ ಪೇಳುವಂಚಿಸದೇ|| ಕಾಪುರುಷರಾಗಿಹರು ಲೋಕದಿ| ಪಾಪಕಂಜುವರಲ್ಲ ಪರಗತಿ|| ವೈಪರೀತ್ಯಕೆ ಹೇಸದಿರುವರು| ನೈಪುಣರುತಾ ವೆಂದುಮೆರೆವರು ||೩||
(ಚಾಣಿಕ್ಯ) ಬುಧನುಕೋಪದಿ ಅಗ್ನ ಅರ್ಥವನೂ| ತಪವ್ಯಯವ ಮಾಡುತ| ವದಗಿಸಲು ಪರಗತಿಗನರ್ಥವನೂ|| ವಿಧಿಸಿಕೊಂಡಂತ್ತಪ್ಪುದದರಿಂ| ಇದುವೆನೆಂದರ ಮೇಲೆಗೈದಿಹ| ವಿಧಿಯನನು ಸರಿಸಿರುವ ಕೋಪವು| ಅಧಮವಾಗದು ನೋಡುಭೂಮಿಪ ||೪|| ಯನ್ನ ಪೌರುಷದಿಂದ ಶಪಥವನೂ| ಮಾಡುತ್ತಲಿಲ್ಲಿಗೆ| ನಿನ್ನಆಶ್ರಯ ಬಯಸಿ ಬಂದು ದನೂ|| ಸನ್ನುತನೆನೀನೊಪ್ಪಿದಂದದಿ| ಮುನ್ನಎನ್ನನು ಚಂದ್ರಗುಪ್ತನು| ತನ್ನ ಕಷ್ಟವ ನರುಹೆ ಅಭಯವ| ನನ್ನಿಯಿಂ ದಿತ್ತಿಹೆನುನೋಡೈ ||೫||

ಭಾಮಿದಿ

ಯನಗೆನಂದರ ನಾಶ ಈಶತ್ಕರವುಲಾಲಿಪು| ದೆನುತದ್ವಿಜ ಪೌರುಷದಿ ನುಡಿಯುತ| ಹನನಗೈಯ್ಯಲಿಕೆನ್ನ ತಪಲೇಶವನು ವ್ಯಯಿಸದೆಯೇ|| ಘನತರದ ಪಾಪಿಗಳ

ಕೊಲ್ಲಲು| ಮನವಮಾಡುತ ಸೇನೆಕಳುಹಲು| ನಿನಗೆಲಭಿಸುವುದರ್ಧರಾಜ್ಯವು ಸುಗಮ ವಹುದೆಂದ ||೧||

ರಾಗ ಸುರಟಿ ಏಕತಾಳ

(ಪರುವತ) ಅರುಹುವೆ ದ್ವಿಜವರನೇ| ಯನ್ನಯ| ಪರಿಯನು ಗುಣಯುತನೇ|| ಹಿರಿಯರ ಕಾಲದಿ ಲಂಪಕಪುರಪತಿ| ಪುರವನುಬಿಟ್ಟೋ| ಡಿರೆಯಾಸಮಯದಿ ||೧|| ಸೆರೆಪಿಡಿಯದೆ ಇರಲೂ| ಆತನು| ನೆರೆರಾಜ್ಯವ ಪೊಗಲೂ|| ಪರಿಪುಷ್ಟನು ಪಿತರಾರ್ಜಿತ ದ್ರವ್ಯವು| ಕರಸೇರಲಿಕವ| ದೊರೆಗಳಕೂಡಿಹ ||೨|| ದಂಡನೆ ಕೂಡುತಲೀ| ನಮ್ಮನು| ದಂಡಿಸಿ ಯುದ್ಧದಲೀ|| ಕೊಂಡುಸಿರಿಯತಾ ನೊಯ್ಯುವಯತ್ನವ| ಕಂಡರುಹಲು ಚರ| ಪುಂಡರಪರಿಯನು ||೩|| ಅರಿಬಲವೆಷ್ಟಿಹುದೂ| ಎನುತಲಿ| ಅರಿತುನೋಡಬಹುದೂ|| ಅರಸರು ಸೇರಿಹ ರ್ಯಾರೆಂಬುದನೀ| ನರಿತುಬಾರೆನುತಲಿ| ಚರರನು ಕಳುಹಿರೆ ||೪|| ಈಗ ನಾವು ನಿಮಗೇ| ಸೇನೆಯ| ತ್ಯಾಗವಮಾಡೆಕಡೆಗೇ|| ಆಗದೆನಮಗೆ ತ್ರಿಶಂಕುವಿನಂದದಿ| ಸಾಗದು ಪ್ರಕೃತದಿ| ತಮ್ಮಯಕಾರ್ಯವು ||೫||

ವಾರ್ಧಿಕ

(ಚಾರಕ) ಅರಿಗಳೆಡೆಗೈದಿರುವ ಚಾರಕನು ನೃಪನಡಿಗೆ| ಎರಗಿಕೈ ಜೋಡಿಸುತ ಪೇಳಿದನು ಗಿರಿವರ್ಮ| ಅರಸುಗಳನೆರಹಿ ಶತಸಾಸಿರಕುಹೆಚ್ಚಿರುವ ಚತುರಂಗಮಂ ಕೂಡುತಾ|| ಬರುವನೆಂಬುದಕೀಗ ನಮ್ಮದೇಶಾಭಿಮುಖ| ಕಿರಿಸಿ ಸೇನಾಧ್ವಜವ ಕಾದಿಹರು ಪಟುಭಟರು| ಪುರದಿಂದ ಪದಿನೈದು ದಿನಕೆಪಡೆ ವೀಕಡೆಗೆ| ಪೊರಡುವುದನರಿತೆನೆನಲು ||೧||

ರಾಗ ಕೇತಾರಗೌಳ ಅಷ್ಟತಾಳ

(ಪರುವತ) ಕೇಳಿದೆಯಾಮಂತ್ರಿ ಕೈರಾತಾಧಿಪನಾದ| ಶೀಲವಮಾತಂಗನನ್ನೂ|| ಪಾಳೆಯಸಹಿತಲಿ ನಮ್ಮಯಗಡಿಯಲಿ| ನಾಳೆಯೆ ಇರಲವನೂ ||೧|| ಧುರಧೀರಕಾಂಭೋಜ ಹೂಣ ಚೀಣರು ಶಕ| ವರಸಿಂಧು ಮಲಯ ಕಾಶ್ಮೀರ|| ಪುರಪತಿಗಳು ತಮ್ಮ ಸೇನೆಯ ಕೂಡುತ್ತ ತೆರಳಿಬರಲಿ ಇಲ್ಲಿಗೇ ||೨|| ಸೇನನಾಯಕನಾದ ಶೇಖರನಮ್ಮಯ| ಸೇನೆಯ ಜೊತೆಗೊಳಿಸೀ|| ತಾನಿರಲಿಲ್ಲಿಯೆ ಪುರದಕಾವಲಿಗಾಗೀ ನೀನೀಗ ತಿಳುಹೆಂದನು ||೩||

ರಾಗ ಸೌರಾಷ್ಟ್ರ ತ್ರಿವುಡೆ

ನೆಸುನಗುತ ಚಾಣಿಕ್ಯನೆಂದನು| ವಸುಧೆಪಾಲಕ ನಿನ್ನ ವಿಕ್ರಮ| ಕಸಮಸಾಹಸ ಕಾರ್ಯವೆಂದೀ| ಸೇನೆಗಳನೂ ||೧|| ಕೂಡಿಸುವೆ ನಖದೊಳಗೆ ನಾಶವ| ಮಾಡುವು

Scanned by CamScanner

ದಕೇಕ್ಕೈಯ್ಯ ಕೊಡಲಿಯು| ಮಾಡಿಚತುರೋಪಾಯದೊಳಗಿಹ ಮೂರನೆಯದಾ||೨|| ಒಂದುಎರಡನೆ ದೀಗಸಲ್ಲದು| ಹಿಂದೆ ಓಡಿರುವಾತ ನೊಳಗದು| ಚಂದವಲ್ಲವು ನಿನ್ನ ಗೌರವ ಕಂದುನೋಡು ||೩|| ದಂಡನೀತಿಯೊ ಳ್ಜೈಸಿದರೆನೀ| ಕಂಡವರು ಜಯಶೀಲ ನೆಂಬರು| ಬಂಡುಮಾಡೆ ಉಪಾಯತ್ರಯದಿಅ| ಖಂಡಜಗವೆ ||೪|| ಪೇಳುವರು ದಯ ಶೀಲ ನೆನ್ನುತ| ಕಾಳಗವನೆಸಗಿದರೆ ಮಡಿವರು| ಆಳುಗಳು ಗಜತುರಗರಥಿಕರ| ಕಾಲ ನೊಯ್ವ ||೫||

ರಾಗ ಕೇದಾರಗೌಳ ಅಷ್ಟತಾಳ

(ಪರುವತ) ಈಗಮತ್ಸ ರಿಯಾಗಿ ಬರುತಿಹ ಗಿರಿವರ್ಮ| ನಾಗರ್ವ ಮುರಿಯಲಿಕೆ|| ಯೋಗಿವರ್ಯನೆನಿಮ್ಮ ಅಭಿಮತವೇನೆಂದು| ತ್ಯಾಗಬುದ್ಧಿ ಯೊಳರುಹೀ ||೧|| ಎನ್ನಮ ನೋರಥ ಕಾರ್ಯಾಂತ ದೊಳುತಿಳಿ| ಮುನ್ನನಿನ್ನಾಪ್ತನಾದ|| ಉನ್ನತ ಬುದ್ಧಿ ಕುಶ ಲತೆಯ ನಿಯೋಗಿಯ| ಎನ್ನಬಳಿಗೆಕಳುಹೈ ||೨|| ಆಗಲಾರಾಯನು ಕಮಲಪೀಡನ ಕರೆ| ದೀಗನಮ್ಮಯ ಕಾರ್ಯಕೇ|| ಪೋಗಿ ಚಾಣಿಕ್ಯರು ಪೇಳಿದರ್ಥದಿ ನೀನು| ಸಾಗಿಸುಕಾರ್ಯವೆಂದ ||೩|| ಅನಿತರೊ ಳುಪವನಕ್ಕೈದಿರೆ ಚಾಣಿಕ್ಯ| ಅಣಿಯಾಗಿ| ಕಮಲಪೀಡ| ವನದೆಡೆಬಂದು ನಿಯೋಗಿಯು ಬಂದಿಹೆ| ನೆನಲು ಕೇಳುತ ಲಾಕ್ಷಣ||೪|| (ಚಾಣಿಕ್ಯ) ಬರೆದುಪತ್ರದ್ವಯವನು ಲಕೋಟೆಯೊಳಿಟ್ಟು|ಅರುಹಿದ ಯುಕ್ತಿಯನೂ|| ಧರಣಿಪಾಲನಮುದ್ರೆ ಯೊತ್ತಿಸುತ್ತೆ ರಡಕು| ತೆರಳಿ ನೀವೀರ್ವರೆಂದ ||೫|| ಬಂದಕಮಲ ಪೀಡ ನೃಪತಿಯಕರಕಿತ್ತು| ತಂದಲ ಕೋಟೆಗಳ|| ಇಂದುವಾಚಿಸಿನೋಡಿ ಮುದ್ರೆಯ ಸಿಕ್ಕುತ| ತಂದುಕೊಡಿರಿ ಎಂದನು ||೬|| ಧರಣಿಪನೆರಡು ಪತ್ರಗಳನ್ನೆವಾಚಿಸಿ| ಸಿರವ ದೂಗುತಲೆಂದನು|| ಪರಿಮಿತಿಇಲ್ಲದ ಬುದ್ಧಿ ಚಾಣಿಕ್ಯರ| ಪರಿಯನಾನೇನೆಂಬೆನು ||೭|| ಕಾಗದವೆರಡಕ್ಕು ಮುದ್ರೆಯನಿಕ್ಕಿನಿ| ಯೋಗಿಯಕರಕೀ ಯುತ್ತ|| ಸಾಗಲು ಉಚಿತ ಭೂಷಣ ವಸ್ತ್ರಧನವನ್ನು| ಬೇಗದಿಂ ಕೊಡಿಸಿದನು ||೮||

ವಾರ್ಧಿಕ

ತನಗಾಪ್ತ ದೂತನಂ ಕಮಲ ಪೀಡನು ಕೊಂಡು| ಜನಪತನ್ನೆಸರಿನಿಸಿ ಬರೆದ ಪತ್ರವಕೊಟ್ಟು|ಇನಿತುಮಾಡುವುದೆಂದು ಪ್ರಕೃತೋಚಿತವನರುಹುತಾ||ಅನಿಲ ವೇಗದ ಅಶ್ವಗಳನಡರಿ ಆವರೀರ್ವ| ಮನದಕಾರ್ಯವಗ್ರಹಿಸಿ ಪೂಳ್ಪಕರ್ತವ್ಯವಂ| ನೆನೆದು ತರ್ಕಿಸಿ ತಮ್ಮೊಳ್ ಕಾಮರೂಪದದೇಶ ಪ್ರಾಗ್ಜ್ಯೋತಿ ಪುರಕೆತೆರಳೆ ||೧||

ರಾಗ ಸಾಂಗತ್ಯ ರೂಪಕತಾಳ

ಕಮಲಪೀಡನು ಮುಂದೆ ಪುರದಬಾಹೆಯೊಳಿರ್ಪ| ರಮಣೀಯ ಮಾದುಪವ ನದೀ| ಶ್ರಮವ ಪರಿಹರಿಸುತ್ತ ಲಿರಲಾಗದೂತನು| ಶ್ರಮಿಸಿ ಬಂದವನಂತೆ ನಟಿಸೀ ||೧||

ಅಲ್ಲಲ್ಲಿಹುಡುಕುತ್ತ ಜನರೊಳುಕೇಳುತ್ತ| ಅಲ್ಲಿಯು ಬೇಹುಗಾರರೊಳು|| ಬಲ್ಲಿದಪರ್ವ ತೇಶ್ವರನ ನಿಯೋಗಿಯು| ಇಲ್ಲಿಗೆಬಂದಿಹನವನು ||೨|| ಆವೆಡೆಯೋಗಿರ್ಪ ನೆಂಬುದ ನರಿತಿರೆ| ನೀವೀಗ ಪೇಳಿದರೆನಗೆ|| ಸಾವಧಾನವನುಳಿದವನ ಕಾಣಲುಬೇಕು| ಧಾವಿಸಿ ಬಂದೆ ತ್ವರಿತದಲೀ ||೩|| ಅರುಹಲುರಾಜ್ಯದ ಕಾರ್ಯಗೌರವಮುಂಟು| ಬರುವುದು ಪುಣ್ಯನಿಮಗೆನುತಾ|| ಕರಚಾಚಿಬೇಡುವ ದೂತನಕಂಡಾಗ| ಅವರೆಈ ಹೊಸಬನ್ಯಾ ರೆನುತಾ ||೪||
(ಚಾರಕ) ಅನ್ಯದೇಶದ ದೂತನಂತೆಕಾಣುವನೀತ| ಇನ್ನೇನು ಛಿಸ್ಸಗಳಿಹುದೋ| ಮುನ್ನವೀತನಅಂಗ ಶೋಧನೆಯನುಮಾಡಿ| ರೆನ್ನಲಿಕವರೋಗೋರ್ವ ||೫|| ಸುತ್ತರಿ ಯುತ ದೂತನಂಗವಶೋಧಿಸೆ| ಲಿತ್ತೊಂದುಕಟಿಯೊಳ್ಳರೂಪ|| ಮತ್ತವನಸಹಿತಲೆ ಕೊಂಡೊಯಿದುಅರಸಗೆ| ಬಿತ್ತರಿಸಲುಪೋಗಲಾಗ ||೬||

ರಾಗ ಭೈರವಿ ಝಂಪೆ

ಧರಣಿಪಾಲಕ ಸೂರ್ಯವರ್ಮನೊಡ್ಡೋಲಗದಿ|ಪರಿವಿಷ್ಟನಾಗಿರಲು ಚರನೋ ರ್ವಪೋಗಿ|| ಶಿರಬಾಗಿವಂದಿಸುತ ಪರ್ವತೇಶನಕಡೆಯ| ವರನಿಯೋಗಿಯುನಮ್ಮ ಪುರ ದೊಳಿಹನಂತೆ ||೧|| ಆತನನುಹುಡುಕುತಲಿ ಈತಬಂದಿಹನಂತೆ| ದೂತನನು ಶೋಧಿ ಸಲು ಕಟಿಯೊಳಗೆಇರಲು|| ಖ್ಯಾತಿವಂತನು ಪರ್ವತೇಶ್ವರನ ಮುದ್ರೆಇದೆ| ರೀತಿ ಎಂತು ಟೊಪತ್ರ ನೋಡಿನೀವೆಂದ ||೨|| ಧರಣಿಪನುಪತ್ರವನು ಕೈಕೊಂಡುಮೋಹರವ| ಪರಿಕಿ ಸುತಲಕ್ಷರವನಾಗ|| ಇರಲಿಈದೂತನಿಗೆ ಕಾವಲಿರಿಸುತನೀವು| ಪುರವಶೋಧಿಸಿ ನಿಯೋ ಗಿಯ ತನ್ನಿರೆಂದಾ ||೩|| ಅಷ್ಟದಿಕ್ಕನುಹುಡುಕಿ ಚಾರಕರು ವನದೊಳಗೆ| ಬಿಟ್ಟುಬಿಡದಿ ಯೊಳಾನಿಯೋಗಿಯನೆಅರೆಸಿ|| ಪಟ್ಟದರಸನ ಆಜ್ಞೆಯಾಗಿಹುದು ಅರಮನೆಗೆ| ಥಟ್ಟನೇ ಗಮಿಸಿನೀವೆನಲು ||೪||
(ಕಮಲಾಪೀಡ) ಮಾರ್ಗದಾಯಾಸದಿಂ ಬಳಲಿವಿಸ್ರಮಿಸುತಿಹೆ| ಶೀಘ್ರದಲಿಬರುವೆ ತಾನೆನುತಾ|| ದೀರ್ಘಶ್ವಾಸವ ಬಿಡುತ ದೂತರೊಡಬಂದನಾ| ತೇರ್ಗಡೆಯ ಸಮಯ ವಾಯ್ತೆನುತಾ ||೫||

ರಾಗ ಬೇಗಡೆ ಅಷ್ಟತಾಳ

ರಾಜಸನ್ನಿದಿಯೊಳಗೆ ಕೈಮುಗಿದೂ| ತಾತಂದಪತ್ರವ| ರಾಜಗೊಪ್ಪಿಸುತೆಂದ ಪ್ರಭುವೆಇದೂ|| ರಾಜರಾಜಾ ಧೀಶಪರ್ವತ| ರಾಜರಿತ್ತನಿರೂಪ ಕುಶಲವ| ರಾಜರೆ ನ್ನೊಳು ಕೇಳಪೇಳಿಹ| ರಾಜಿಸುವ ತವಪದದೊ ಳೆಂದನು ||೧||
(ಸೂರ್ಯವರ್ಮ) ಈಶಕೃಪೆಯಿಂನಾವು ಕುಶಲಿಗಳೂ| ಪರಿವಾರಪ್ರಜೆವಸು| ಧೀಶ ರೆಲ್ಲರುಕ್ಷೇಮವೇಪೇಳೂ||ದೇಶದಲಿ ಸರ್ವರಿಗೆಕುಶಲವೆ| ಈಸುದೂರ ನಿರೂಪಕಳುಹೆವಿ| ಶೇಷವೇ ನೃರಾಜಭವನದಿ| ಲೇಶವಿಡದುಸುರೆನೆಧರಾಧಿಪ ||೨||

(ಕಮಲಾಪೀಡ) ನಿಮ್ಮಬಂಧುತ್ವವನೆ ಬೆಳಸಲಿಕೇ। ಮನವಮಾಡಿ ಪ್ರಭುಗಳು। ನಮ್ಮ ನಿಲ್ಲಿಗೆಕಳುಹೆ ತವಪದಕೇ॥ ಸಮ್ಮತಿಸಿ ಬಾಂಧವ್ಯವಾದರೆ। ಹೆಮ್ಮೆಪಡುವಂತಹುದು ಈರ್ವರ। ಹಿರ್ಮೆಲೋಕಾನಂದ ಕರಮುಹು। ದಿಮ್ಮಡಿಯ ಸುಖಶಾಂತಿ ಸಿಗುವುದು ॥೩॥

ರಾಗ ಕೇದಾರಗೌಳ ಅಷ್ಟತಾಳ

ಅರಸನುಮುದ್ರೆಯ ನೊಡೆದು ಪತ್ರವನೋಡಿ। ಶಿರವದೂಗುತ ಮಂತ್ರಿಯು॥ ಕರಕಿತ್ತುವಾಚಿಸ। ಲರುಹಲು ಸಚಿವನು। ಹರುಷದಿಂದೋದಿದನು ॥೧॥ ಸ್ವಸ್ತಿಶ್ರೀ ಮತುವೈರಿ ಕರಿಗೆಪಂಚಾಸ್ಯಭೂ। ಪೋತ್ತುಮರಾಗಿರುವಾ॥ ಉತ್ತಮಕುಲಜ ನಾಗಿರುವ ಪ್ರಾಗ್ಜ್ಯೋತಿಯ। ಪೃಥ್ವಿಯಪಾಲಕಗೇ ॥೨॥ ಧರಣಿಯೊಳ್ಕ್ಯಾಹುರಿ ನಗರದೊಳಿಉತಿಹ। ಪರುವತೇಶ್ವರಮಾಡುವಾ॥ ಶಿರಸಾಷ್ಟಾಂಗವುನಿಮ್ಮ ಕುಶಲವದಯುದಿಂದ। ಬರಸುವ ದೈಸೆಮತ್ತೆ ॥೩॥ ನಿಮ್ಮಕುಮಾರಿ ಸೀಮಂತಿಕೆಇಂದಲಿ। ನಮ್ಮಕುಮಾರನಿಗೆ॥ ಧರ್ಮಸಮ್ಮತವಾದ ದ್ವಿತೀಯಆಶ್ರಮವೀಗ। ತಮ್ಮಿಂದಲಾಗಬೇಕು ॥೪॥ ನಿಮ್ಮ ಬಾಂಧವ್ಯವ ಬಯಸಿನಿಯೋಗಿಯೊ। ಳಿಮ್ಮಭಿಮತವಪೇಳ॥ ತಮ್ಮಬಳಿಗೆನಾವು ಕಳುಹಲಾಗಿದೆತಾವು। ಸಮ್ಮತಿ ಇತ್ತರೀಗ ॥೫॥ ದೇವರದಯೆ ಇಂದಲೀಕಾರ್ಯ ವಾದರೆ। ನಾವುಧನ್ಯರುಜಗದೀ॥ ನೀವೆಮ್ಮಭ್ಯುದಯಕ್ಕೆ ತವಕ್ಷೇಮಲಾಭಕೆ। ನಾವೆಂದುಬರಸಿರುವಾ ॥೬॥ ವಕ್ಕಣಿಕೆಯನೋಡಿ ಇದುಶ್ಲಾಘ್ಯ ಸಂಬಂಧ। ವಕ್ಕೆಂದು ಹರ್ಷಿಸುತ॥ ಲೆಕ್ಕಿಸಿತನ್ನ ಬಳಿಯೊಳಿ ದರ್ಪತ್ರವ। ಅಕ್ಕರದಿಂದಿತ್ತನು ॥೭॥ ಕಮಲಪೀಡಕನದ ಕೈಕೊಂಡುವಾಚಿಸಿ। ಭ್ರಮಿಸಿ ಶಿರವತಗ್ಗುತ್ತ॥ ಅಮಿತದ್ರವ್ಯವಕಳ ಕೊಂಡವನಂತವ। ಕ್ರಮದಿಂದ ಚಿಂತಿಸಲು ॥೮॥ ಯಾಕೆನಿಯೋಗಿಯೆ ಚಿಂತಿಸುವಂತಿದೆ। ವ್ಯಾಕುಲವೇನೆನ್ನುತ॥ ನೀಕೊಂಡುಪತ್ರವಕರಣಿಕ ವಾಚಿಸ। ಬೇಕೆಂದುನೃಪನರುಹೆ ॥೯॥

ರಾಗ ಬೇಗಡೆ ಅಷ್ಟತಾಳ

(ಸೂರ್ಯವರ್ಮ) ಪತ್ರವನುಕೊಡಲಾಗ ಕರಣಿಕಗೇ। ವಾಚಿಸಲುಶ್ರೀಮತು। ಮಿತ್ರನಾಗಿಹ ಕಮಲಪೀಡನಿಗೇ॥ ಪೃಥ್ವಿಪತಿ ಪರ್ವತನುಮಾಡುವ। ಉತ್ತುಮಾಶಿಷ ಕ್ಷೇಮಸಾಂಪ್ರತಿ। ಮತ್ತೆನಿನಗರುಹಿದ ವಿಚಾರವ। ಗುಪ್ತದಿಂ ಯೋಚಿಸುತಮಾಳ್ಪುದು ॥೧॥ ನಮ್ಮಪುತ್ರನು ಮಲಯಕೇತುವಿಗೇ। ಕನ್ಯಾರ್ಥಿ ಯಾಗಿಯೆ। ವಮ್ಮತದಿಪ್ರಾಗ್ಜ್ಯೋತಿಷಾಪುರಿಗೇ॥ ತಮ್ಮಕಳುಹಿರ ಲಲ್ಲಿಗಧಿಪತಿ। ಧರ್ಮಪಾಲಕ ಸೂರ್ಯವರ್ಮರ। ಹರ್ಮ್ಯವನುನೀವ್ ಸೇರಿದರ್ಶನ। ವಮ್ಮೆಆಗದೆಉಳಿದುದಾದರೆ ॥೨॥ ಅರ್ಥಬೇರಿಹುದದನು ಪೇಳುವೆನೊ। ಲಂಪಕಾಪುರ। ಧಾತ್ರಿಕನು ಗಿರಿವರ್ಮನೆಂಬುವನೂ॥ ಉತ್ತುಮದ ಸಭೆಗೈದುತನ್ನಯ। ಮಿತ್ರಮಂಡಲಿ ಗಳನೆಕೂಡುತ। ಅರ್ಥಿಯಿಂ ಸಂವಾದಗೈದುನೃ। ಪೋತ್ತುಮರಪ್ರ ಶಂಶೆಕಾಲದಿ ॥೩॥ ಕಾಮರೂಪಾಧಿಪರ ವಂಶದಲೀ। ಸಾಂಕರ್ಯ ದೋಷವು। ಸಾಮುಹಿಕ ವಾಗಿರುವಅರ್ಥದಲೀ॥ ಭೂಮಿಪಾಲರ ಮುಂದೆಗಳಹುತ।

ಈಮಹಿಯೊಳಾದೇಶಪಾಲಕ। ನಾಮಸಲ್ಲದು ಪೂನ್ಯಶೂರನು। ನಾಮಕೊಪ್ಪುವನಲ್ಲವೆಂದಿರೆ ॥೪॥ ಇದುವೆವೈಯಕ್ತಿಕದ ದೋಷದಲೀ। ಮಾತ್ಸರ್ಯಮದದಿಂ। ದಿದನರುಹಿಸಭೆಯೊಳಗೆಜನಗಳಲೀ॥ ಸದಭಿಮತವನು ಅಳಿಸಲೋಸುಗ। ಉದಯಿಸಿದ ಯತ್ನಗಳೊತ್ತಿಳಿಯುತ। ಮುದಗಳಾದರೆ ನಿನ್ನಮನಸಿಗೆ। ವಿಧಿಸಿರುವ ಕಾರ್ಯವನೆಮಾಳ್ಪುದು ॥೫॥

ರಾಗ ಕೇದಾರ ಗೌಳಝಂಪೆ

(ಸೂರ್ಯವರ್ಮ) ಇನಿತುವಕ್ಕಣೆಯನೋಡಿ। ನೃಪನಾಗ। ಮನದೊಳಗೆ ರೋಷಗೂಡಿ॥ ಕೆಣಕಿಕಲ್ಲಿಟ್ಟುಹುಲಿಗೇ। ಶುತ್ತಾದ। ಲೆನುತ ಲೊರೆದನುಸಚಿವಗೇ ॥೧॥ ಎಲೆಮಂತ್ರಿಗಿರಿವರ್ಮನೂ। ಮದದಿಂದ। ಕುಲವಹಿಯ್ಯಾಳಿಸಿದನೂ॥ ತಲೆಯ ನಿಳುಹದೆ ಆತನಾ। ಯನ್ನ ಶಿರ। ಕೊಲಿದಿರಿಸೆ ಮಕುಟವನ್ನಾ ॥೨॥ ಎನುತಪಲ್ಗಡಿಯುತಾಗ। ಸಾರಿಸೈ। ಘನತರದ ಪುರಿಯೊಳೀಗ॥ ಮನವರಿಕೆಯಾಗುವಂತೇ। ಸೇನೆಗಳು। ಅಣಿಯಾಗಿ ಪೊರಡುವಂತೇ ॥೩॥ ಈಗಸೇನಾಧಿಪತಿಗೇ। ನೇಮಿಸೈ। ಪೋಗಿಸೈನ್ಯವುನಾಳಿಗೇ॥ ತಾಗಿತರಿಂಗಿಣಿ ತೀರದೀ। ಬೀಡ್ಬಿಡುತ। ಲಾಗದ್ವಜಊರಿನೆಲದೀ ॥೪॥ ಸಾಮಂತ ಅರಸುಗಳಿಗೂ। ಗರಡಿಯಾ। ಸ್ತೋಮದೊಳಗಿಹ ಭಟರಿಗೂ॥ ಸ್ವಾಮಿನಿಷ್ಪರಬಳಗಕೇ। ಸಾರಿಸೈ। ನೇಮದಿಂಪೊರಮಡಲಿಕೇ ॥೫॥ ಧರಣಿದೇವಿಯ ಪೌತ್ರನೂ। ಭಗದತ್ತ। ಧರಣಿಪಾಲರೊಳ್ಶ್ರೇಷ್ಟನೂ॥ ಇರುವೆ ನಾತನವಂಶದೀ। ಪೆಸರಾಂತು। ಧುರಧೀರನಾಗಿ ಜಗದೀ ॥೬॥ ಸೇಡತೀರಿಸ ದುಳಿದರೇ। ನಮಗೀಗ। ಹೇಡಿಯನ್ನದೆಬಿಡುವರೇ॥ ಪೋಡಿಯಾತನಶಿರವನೂ। ಇಕ್ಕಡಿಯ। ಮಾಡಿ ಖ್ಯಾತಿಯ ಪಡೆವೆನೂ ॥೭॥

ರಾಗ ಕೇದಾರಗೌಳ ಅಷ್ಟತಾಳ

ಕರೆದುನಿಯೋಗಿಯೊ ಳೊರೆದನುಭೂಮಿಪ। ಪರುವತೇಶ್ವರನೊಡನೇ॥ ಸ್ಥಿರವಾದಬಾಂಧವ್ಯ ಬೆಳಸಬೇಕೆಂದಿರೆ। ಪರಿಯುಬೇರಾಗಿಹುದು ॥೧॥ ಎನ್ನಯಕುಲದ ವಿಮರ್ಶೆಗೆಗಿರಿವರ್ಮ। ನನ್ನುಅಂತಕನಲ್ಲಿಗೆ॥ ಮುನ್ನಕಳುಹಿದಲ್ಲ ದಿನ್ನಿಲ್ಲನಾತೀಗ। ಳೆನ್ನುತ ಸಚಿವನೊಳು ॥೨॥ ಬಂದನಿಯೋಗಿಗೆ। ಸರಿಯಾದ ಉಪಚಾರ। ದಿಂದಲಿಸಂತವಿಸೀ॥ ತಂದನಿರೂಪ ಕುತ್ತರವಾಗಿಪತ್ರವ ನಿಂದುಬರೆಸಿಕಳುಹೊ ॥೩॥

ವಾರ್ಧಿಕ

ಜನಪನಪ್ಪಣೆಯಂತೆ ಸಚಿವಪತ್ರವಬರೆಸಿ। ವಿನಯದಿ ನಿಯೋಗಿ ಯನ್ನುಪಚರಿಸಿ ಕರಕಿತ್ತು। ಘನಸೈನ್ಯಮಂತರಂಗಿಣಿ ತೀರಕೊಯ್ವಂತೆ ಸೇನಾಧಿಪತಿಗೆ ತಿಳುಹೀ॥ ತನಗಾಪ್ತದೂತರಿಂ ಅರಸುಮಕ್ಕಳಕರೆಸಿ। ಧನುಶರವ ಸಂಗ್ರಹಿಸಿ ಪುರದಿಡಂಗುರಪೊಯಿಸಿ। ಧನಿಗರುಹೆ ಪೊರಟು ಸುಮುಹೂರ್ತದೊಳ್। ರಥವಡರಿ ಪುರದಿಂದ ಪೊರಪಡಲ್ಕೆ ॥೧॥

Scanned by CamScanner

ರಾಗ ಬೇಗಡೆ ಅಷ್ಟತಾಳ

ನೋಡಿಕಮಲಾಪೀಡ ಸಂತಸದೀ। ಚಾಣಿಕ್ಯನಂನುತಿ। ಮಾಡುತಲ್ಲಿಂಪ್ರೊರಟು ಸಂಭ್ರಮದೀ॥ ಓಡಿಸಿದ ತುರುಗವನು ತಮ್ಮ್ರಯ। ರೂಢಿಗತಿವೇಗದಲಿ ಸೇರುತ। ನೋಡೆನೃಪನೋಲಗದಿ ಕುಳಿತಿರೆ। ಮಾಡಿದನು ದಂಡಪ್ರಣಾಮವ ॥೧॥

(ಪರುವತ) ಕಮಲಪೀಡನೆ ಕ್ಷೇಮವೇ ನಿನಗೇ। ಎನುತೆತ್ತಿಪರಸುತ। ಅಮಿತಸಂತಸವಾಯಿತೀಗೆನಗೇ॥ ನಿಮಿಷ ನಿಮಿಷಕುನಿನ್ನದಾರಿಯ। ಭ್ರಮಣೆಯೊಳ ಗಿರುತಿರ್ದೆನಾದಡೆ। ಶ್ರಮವನ್ವೈಸುತ ಪೋದಕಾರ್ಯವು। ಕ್ರಮದಿಸುಗಮದೊಳಾಯಿತೇನ್ಯೆ ॥೨॥ ಧರಣಿಪತಿಪೇಳುವೆ ರಹಸ್ಯವನೂ। ಯನುತಾ ನಿಯೋಗಿಯು। ಅರುಹೆಆದ್ಯಾಂತದ ವಿಚಾರವನೂ॥ ಹರುಷದಿಂಕೇಳುತ್ತಲುತ್ತರ। ಬರೆಸಿಹುದನೋಡುತ್ತ ಸಚಿವ॥ ಕರೆದು ಪೇಳಿದ ತನ್ನ ಮನದೊಳ। ಗಿರುವವಿಷಯವ ಸ್ಪಷ್ಟಪಡಿಸಿದ ॥೩॥

ರಾಗ ಕೇದಾರಗೌಳ ಅಷ್ಟತಾಳ

(ಪರುವತ) ನೋಡಿಚಾಣಿಕ್ಯರು ಸಾಹಸಕಾರ್ಯವ। ಆಡಿದಂತೆಸಗಿದರೂ॥ ಮಾಡಬೇಕಾ ಚಂದ್ರಗುಪ್ತನಿಗುಪಕಾರ। ರೂಢಿಮೆಚ್ಚುವತೆರದೀ ॥೧॥ ಸೇನೆಯುಅಳಿಯದೆ। ಮಾನವುಉಳಿಯಿತು। ಹಾನಿಯಾಗದೆ ಧನವೂ। ಜ್ಞಾನಸಂಪನ್ನರು ದಂಡನೀತಿಯ ಶಾಸ್ತ್ರ। ಚಾಣಿಕ್ಯರರಿತಿಹರೂ ॥೨॥ ಯನುತಭೂಮಿಪನಾಗ ಸಚಿವರೊಳರುಹುತ। ಕನಕಹಾರವುವಸ್ತ್ರವ॥ ಮನಕೊಪ್ಪುವಂತೆನಿಯೋಗಿಗೆ ತರಿಸಿತ್ತು। ಘನತೆಯಿಂ ಕಳುಹಿದನೂ ॥೩॥ ಕರೆಸಿಚಾಣಿಕ್ಯರಿ ಗೊರೆವುದೀವುಪಕೃತಿ। ಗಿರಿವರ್ಮನೊಡನೆನಾವು॥ ಧುರಕಾಗಿಪೋಪುದು। ಪರರಿಂದ ಕೊನೆಗೊಂಡು। ನಿರುಪಾದಿತವು ಆಯಿತು ॥೪॥ ಯನೆಕೇಳಿ ಚಾರನಕಳುಹಿಚಾಣಿಕ್ಯರ। ಜನಪಕುಮಾರಕನ॥ ಘನಜವದಿಂದಲಿ। ಬರಿಸಿದ ಸಚಿವನು। ಜನಪತಿಯರಮನೆಗೇ ॥೫॥ ಹರಿಯುವಿಷ್ಟರದಿ ಕುಳ್ಳಿರಿಸುತ್ತಲವನ್ನು। ಪರಿಪರಿಯುಪಚರಿಸೀ। ಪರಮಸಾಹಸಿಗಳು ನೀವೆಂದುಪೊಗಳುತ್ತ। ಧರಣಿಪಾಲನು ನಮಿಸೀ ॥೬॥

ರಾಗ ಸುರಟಿ ಏಕತಾಳ

(ಚಾಣಿಕ್ಯ) ಧರಣಿಪನೀನೆಮಗೇ। ಈಪರಿ। ಪರಿತುಷ್ಟತೆಯೊಳಗೇ। ಕರಸುತಉಪಚರಿಸಿರುವುದ ನೋಡಲು। ಗಿರಿವರ್ಮನಧುರ। ಪರರಿಂದಾಯಿತೆ ॥೧॥

(ಪರುವತ) ಧುರವೆಸಗದೆನಾವೂ। ಪರರಿಂ। ಪರಿವ್ಯವಸ್ಥಿತವಹವೂ॥ಅರುಹಿರಿನಿಮ್ಮಯ ಕಾರ್ಯಕೆದಾರಿಯ। ಹರುಷದಿ ಪ್ರತ್ಯುಪಕಾರವಗೈಯ್ಯಲು ॥೨॥

(ಚಾಣಿಕ್ಯ) ಗಾಣದತುದಿಯೊಳಗೇ। ತಿಸಿಸನು। ಪೋಣಿಸಿನದಿಯೊಳಗೇ॥ ಕಾಣುವ ಮತ್ಸ್ಯವ ಸೆಳೆಯುವತೆರದಲಿ। ಜಾಣತನದಿನವ ನಂದರಶೆಳೆಯುವೆ ॥೩॥ ನಿನ್ನಯಸೇನೆ

ಯನೂ। ಕಳಿಸುತ। ಲಿನ್ನಿಹಕಾರ್ಯವನೂ॥ ಯನ್ನಯಪಾಲಿಗೆ ಬಿಡುನೀನವರನು। ಮಣ್ಣನುಕೂಡಿಸಿಬಿಡುವೆನಾನೆಂದನು ॥೪॥

ಭಾಮಿನಿ

(ಪರುವತ) ಕೇಳಿಹರ್ಷಿತನಾಗಿ ನೃಪತಿಯು। ಪೇಳಿದನು ಸಚಿವನೊಳುನಮ್ಮಯ। ಪಾಳಯವುಈಶಾನ್ಯ ದಿಕ್ಕಿನೊಳಿಹುದು ತರಿಸುತಲೀ॥ ನಾಳೆಅಘನಾಶಿನಿಯತೀರದಿ। ಕೀಲಿಸಲಿ ಧ್ವಜಮುನ್ನ ಅನುಜಗೆ। ಹೇಳಿಕರಸೈಎನೆ ವಿರೋಚನಬಂದನನಿತರಲಿ ॥೧॥

ರಾಗ ಮಾರವಿ ಏಕತಾಳ

(ವಿರೋಚನ) ಅಪ್ಪಣೆಏನೈ ಅಣ್ಣನೆನಿನ್ನಯ। ನಪ್ಪದಕಾರ್ಯದಲೀ ॥ತಪ್ಪದೆಸೇವೆಗೆ ಮಾಸಲುದೇಹವು। ಇಪ್ಪುದುಸನಿಹದಲೀ ॥೧॥

ರಾಗ ಕೇದಾರಗೌಳ ಅಷ್ಟತಾಳ

(ಪರುವತ) ಅನುಜಕೇಳೈ ಚಂದ್ರಗುಪ್ತನುನಮ್ಮಯ।ತನಯನಂತಿಹನವಗೇ॥ ಗುಣವಿಹೀನರು ನವನಂದರುಎಸಗಿದ। ಡೆನಿತೊಕಷ್ಟವಸಹಿಸೀ ॥೧॥ ಚಾಣಿಕ್ಯರೆಂಬ ಬ್ರಾಹ್ಮಣರ ಸಹಾಯದಿ। ತಾಣವ ಬಿಡುತತನ್ನ॥ ಪ್ರಾಣರಕ್ಷಣೆ ರಾಜ್ಯ ದಾಕಾಂಕ್ಷೆಇಂದಲಿ। ತಾನಿಲ್ಲಿಬಂದಿಹನು ॥೨॥ ಗಿರಿವರ್ಮನಿಂದಲಿ ಬರುತಿಹಉಪಹತಿ। ಪರಿಹರಿಸಿಹರವರೂ॥ ಮರೆವುದೆ ಪ್ರತ್ಯುಪಕಾರವಗೈಯ್ಯಲು। ಭರವಸೆ ಇತ್ತಿಹೆನೂ ॥೩॥

ರಾಗ ಮಾರವಿ ಏಕತಾಳ

(ವಿರೋಚನ) ನಿನ್ನಭಿಮತವೇ ಯನ್ನಯಮತವದು। ಅಣ್ಣನೆಪೇಳೀಗಾ॥ ಯನ್ನಯ ಕಾರ್ಯವದಾವುದು ಅಪ್ಪಣೆ ಯನ್ನೀವುದುಬೇಗಾ ॥೧॥

ವಾರ್ಧಿಕ

(ಪರುವತ) ಅನುಜಪಾಟಲಿಪುರದ ದಂಡಯಾತ್ರೆಗೆನಾವೆ। ಘನಸೇನೆಯಂಕೂಡಿ ಪೊರಡಬೇಕಾಗಿಹುದು। ತನಗೀರ್ಪಸೇನೆಯಂ ಕೂಡುತಾಕ್ಕೈರಾತ ಪತಿಯಾದ ಮಾತಂಗನೂ ಅನಿಲವೇಗದಿಪೋಗಿ ಪುರಕಡ್ಡಗಟ್ಟಲೀ। ಕ್ಷಣದಿಶೇಖರನಮ್ಮ ಸೇನೆಯೊಳಗರ್ಧಮಂ। ಸನಿಹಸೋದರಮಾವ ಅಂಗಾರವರ್ಮನಿಂ ಗೊಪ್ಪಿಸುತಲಿಲ್ಲಿಬರಲೀ ॥೧॥

ರಾಗ ಕೇತಾರಗೌಳ ಅಷ್ಟತಾಳ

(ಪರುವತ) ಆರುಲಕ್ಷವುಕಾಮಾಟಗರ ಉದ್ದಾಲಕ। ದಾರಿಯಸರಿಪಡಿಸೀ॥ ನೀರಿಲ್ಲ

Scanned by CamScanner

ದೆಡೆಯಲ್ಲಿ ತೋಡಿಸಿಭಾವಿಃ ಸೇರಿಸಿತೃಣಕಾಷ್ಟವ ॥೧॥ ಅಲ್ಲಲ್ಲಿಜನರಿಗೆ ಶ್ರಮವು ತೋರದದಹಾಗೆ। ವಳ್ಳಿತಿನಿಸುತಿಂಡಿಯ॥ ಉಲ್ಲಾಸವಾಗುವ ಪಾನೀಯದರವಟ್ಟಿ। ಯಲ್ಲಿ ನಿರ್ಮಿಸಿಪೋಗಲೀ ॥೨॥ ನದಿಗಳದಾಟಲು ಆಯಾಸವಿರದಂತೆ। ತ್ರಿದಶಸಾವಿರನಾವೆಯ ವದಗಿಸಿ ದಾಶನೆಂಬುವನು ಕಾದಿರಲಲ್ಲಿ। ವದಗಲುಸಮಯದೊಳು ॥೩॥ ಸಾಮಂತ ನರಪತಿ ಮಗಧನು ಶಕ ಚೀನ। ನೇಮದಿಹೂಣ ಗಾಂಧಾರ॥ ಭೂಮಿಪರೀ ಚಂದ್ರ ಗುಪ್ತನ ಸನಿಹದಿ। ಸ್ವಾಮಿನಿಷ್ಟೆಯೊಳಿರಲೀ ॥೪॥ ಸೋದರಮಾವನು ಲೂಕಮಂತ್ರಿಯ ಕೂಡಿ। ಆದರದಿಂಪುರದೀ॥ ವೋದಗೆಡದಹಾಗೆ ಅರಮನೆ ಜನರನ್ನು। ಕಾದುಕೊಂಡಿರ ಲೆಂದನು ॥೫॥ ಮಲಯೇಶಸಿಂಹನಾದನು ನಮ್ಮ ಪುತ್ರನಾ। ಮಲಯಕೇತುವಿ ನ್ಹಿಂದೆಯೇ॥ ಬಲಗಳ ನೋಡಿಕೊಂಡಿರಲೆಂದು ನೇಮಿಸು। ಛಲದಂಕನೀನೆಂದನು ॥೬॥

ವಾರ್ಧಿಕ

(ವಿರೋಚನ) ಹಸ್ತ್ಯಶ್ವರಥಪದಾತಿಗ ಳರಸರಿಂದೆಸವ। ಅತ್ಯಧಿಕಬಲಗಳಂ ಕೂಡು ತಣ್ಣನಿಗರುಹೆ। ಉತ್ತಮದ ಘಳಿಗೆಯೊಳು ಪುರವಪ್ರೊರಮಡೆಸೇನೆ ಕೆಂದೂಳುನಭಕಡರಲು॥ ಪೃಥ್ವಿಪತಿಅಂದಣವ ಕಳುಹಿಚಾಣಿಕ್ಯರಿಗೆ। ಮತ್ತೆ ಅಳಗಿರಿಯಂಬ ಕರಿಯ ನೃಪಸುತನಿಂಗೆ। ಇತ್ತುತಾಂ ಮಲಯಕೇತುವಕೂಡಿರಥವೇರೆ ಜಯನಿನಾದವು ವೊಳಗಲು ॥೧॥

ರಾಗ ಭೈರವಿ ತಂಡಕ ರೂಪಕ ತಾಳ

ನಡೆಯಿತಾಗ ನೃಪತಿಯ। ಪಡೆಯುಬೇಗಾ॥ಪ॥ ಕೊಂಬುಕಹಳೆಯ ಪಟಹ ಭೇರಿವಿ। ಡಂಬನೆಯವಾದ್ಯಗಳ ಘೋಷದಿ। ಇಂಬುಗೊಡ ದಂತಖಿಳಸೇನೆಯು। ಸಂಭ್ರಮದೊ ಳಲ್ಲಲ್ಲಿರಚಿಸಿಹ। ತಂಬಿನಲಿ ವಿಶ್ರಾಂತಿಪೊಂದುತ। ಮುಂಬರಿದುತೆರಳಲ್ಕೆ ಸೂರ್ಯನ। ಬಿಂಬಮಸುಕಾಗುತ್ತಪೋಗಲು। ಅಂಬರಕೆಕೆಂಬಣ್ಣ ಬಳಿಯಲು॥ ನಡೆಯಿತಾಗ ॥೧॥ ಅರಸುಮಕ್ಕಳ ಕರೆದುದ್ವಿಜವರ। ನರುಹಿದನು ಗಡಿದುರ್ಗವನುಹಿಡಿ। ದಿರಿಸಿಸೇನೆಯ ಬಲಿದುಅಲ್ಲಿಯ। ತುರುಗಳನು ಗಜತುರುಗಸಹಿತಲಿ। ಶರೆವಿಡಿದು ಕಟ್ಟೆಸುತಪಾಟಲಿ। ಪುರಕೆಮುತ್ತಿಗೆ ಹಾಕಿಕೋಟೆಯ। ನಿರದೆಕೆಡಹುತ ದಾಳಿಎಬ್ಬಿಸಿ। ಬರುವಅರಿಗಳ ತರಿದುಆಯುಮ। ಪುರಿಗೆಅಟ್ಟರಿ ಏಕಕಾಲದಿ। ಎಂದನಾಗ ಬಲಗಳ ಮುಂದೆಬೇಗ ॥೨॥

ರಾಗ ಕೇದಾರಗೌಳ ಅಷ್ಟತಾಳ

ಕರೆದು ಭೂಮಿಪನೊಳು ಪರಿಯಚಾಣಿಕ್ಯನು। ಅರುಹಿ ರಹಸ್ಯದೊಳು॥ ದೊರೆಯೆನಾನೀಗೊಂದು ಕಾರ್ಯವನೆಸಗುತ್ತ। ಬರುವೆನೆಂಟನೇದಿನದೀ ॥೧॥ ಅಲ್ಲಿಯವರೆಗೆ ಈ ಚಂದ್ರಗುಪ್ತನಕಾರ್ಯ। ದಲ್ಲಿಸೀ ಮನವಿರಿಸೀ॥ಕ್ಷುಲ್ಲಕಜನರನ್ನು ಸೈನ್ಯದೊ ಳ್ಪೊಗ

ದಂತೆ। ಎಲ್ಲಾರೊಳ್ ನಿಗವಿರಲೀ ॥೨॥ ಎನುತನೈಮಿಷವನ ಗಂಗಾತೀರದೊಳೀರ್ಪ।
ತನಗಾಪ್ತ ನಾಗಿರುವಾ॥ ಘನಪಾರಿ ಇಂದುಶರ್ಮನಕಂಡು ಕುಶಲವ। ಅನುನಯದಿಂ
ಕೇಳುತ್ತ ॥೩॥ ಇಂದುಶರ್ಮರೆ ನಿಮ್ಮೊ। ಳೊಂದುಕಾರ್ಯಾರ್ಥದಿ। ಬಂದೆನಿಲ್ಲಿಯವ
ರೆಗೆ॥ ಎಂದುಪೇಳಲುಕೇಳಿ ತವಪಾದದರ್ಶನ। ದಿಂದನಾಕೃತಕೃತ್ಯನು ॥೪॥
(ಇಂದುಶರ್ಮ) ಆವಕಾರ್ಯಗಳಿರ ಲದನುಸಾ ಶಿರದೊಳು। ಭಾವಶುದ್ಧಿಯೊ ಳ್ಪೊ
ರುತ॥ ಸೇವೆಯಗೈಯ್ಯದೆ ಇರಲುನಾನಿಮ್ಮಯ। ಸೇವಕನಲ್ಲೆಂದನು ॥೫॥

ವಾರ್ಧಿಕ

(ಚಾಣಿಕ್ಯ) ಹಿಂದೊಂದುದಿನ ಕುಸುಮಪುರದನ್ನ ಛತ್ರದೊಳು। ನಂದರೆಸಗಿರುವ ದುಷ್ಕಾರ್ಯದಿಂ ಕೋಪಿಸುತ। ಅಂದುಶಪತವಮಾಡಿ ಪೊರಟುಮೌರ್ಯಕನಿಂಗೆ ಅಭಯವನ್ನಿತ್ತುಬಳಿಕ॥ ಇಂದಿನಾವರೆಗೆ ಸಾಹಸವೆಸಗಿದುದಪೇಳೆ। ಇಂದುಶರ್ಮರೆನಿಮ್ಮ ಶಿಷ್ಯರಿಂದೊಡಗೂಡಿ। ಮುಂದೆನ್ನಕಾರ್ಯಮಂ ಸಫಲಗೊಳಿಸಲು ಮಿತ್ರನಹುದೆಂದು ಪೇಳ್ವೆನೆನಲು ॥೧॥

ರಾಗ ಸುರಟಿ ಏಕತಾಳ

(ಇಂದುಶರ್ಮ) ನೀವುಸೂಚಿಸಿದಂತೇ। ಕಾರ್ಯವ। ನಾನೆಸಗುವೆಮುಂತೇ॥ ಕೋವಿದರಾಗಿಹ ಶಿಷ್ಯರಸಹಿತಲಿ। ಭಾವಶುದ್ಧಿಯೊಳದ ಮುಗಿಸುವೆನೆಂದನು ॥೧॥
(ಚಾಣಿಕ್ಯ) ಕರೆಸಲಿಕಾಕ್ಷಣದೀ। ಶರ್ಮನು। ವರಶಿಷ್ಯರಮುದದೀ॥ ಪರಿಕಿಸಿಪ್ರಶ್ನೆಯ ಸುರಿಮಳೆಗರಿಯಲು। ಬರಲುತ್ತರಈ। ಗೊರೆವೆತಾನೆಂದನು ॥೨॥

ರಾಗ ಕೇದಾರಗೌಳ ಅಷ್ಟತಾಳ

ಬುದ್ಧಸನ್ಯಾಸಿಯ ವೇಷದೊಳಗೆಜೀವ। ಸಿದ್ಧಿಯಂಬಭಿದಾನದೀ॥ ವಿದ್ಯಕೌಶಲ್ಯದಿ ಜ್ಯೋತಿಷ್ಯಮೊದಲಾದ। ಸಿದ್ಧಿಹೊಂದಿಹನೆನ್ನುತ ॥೧॥ ಸಮಯೋಚಿತದನಾಮ ವೇಷಭಾಷೆಯನೀಗ। ಕ್ರಮದಿಂದಶಿಷ್ಯರಿಗೆ॥ ಧಮನಕ್ಕೆಸರಿಯಾದ ಸಲಹೆಯನೀಡುತ್ತ। ಗಮಿಸಿಪಾಟಲಿಪುರಿಗೇ ॥೨॥ ಅಮಾತ್ಯ ರಾಕ್ಷಸ ಮೊದಲಾದಸಚಿವರ। ಪ್ರೇಮವ ಘಳಿಸಿಕೊಂಡು। ಆಮಹಿಯೊಳಗಾಪ್ತ ನಂತೆನೀ ನಟಿಸುತ್ತ। ಸಾಮಂತ ರಾಜರಿಗೆ ॥೩॥ ನಂದರಮೇಲಿಹ ಭಾವನೆಏನೆಂದು। ಸಂದೇಹ ಕೆಡೆಗೊಡದೇ॥ ಸಂದಿಗ್ಧ ದರ್ಥದಿಕೇಳಿ ನೀನರಿಯುತ್ತ। ಕುಂದುಕೊರತೆಗಳನೂ ॥೪॥ ಎಲ್ಲಿಹುದ್ಯಾವ ಕಾರಣದಿಂದ ಲೆಂಬುದ। ನೆಲ್ಲವತಿಳಿದೆನಗೇ॥ ಸಲ್ಲಿಸಬೇಕು ವಾರ್ತೆಯನು ರಹಸ್ಯದಿ। ಬಲ್ಲಶಿಷ್ಯನ ಮುಖದೀ ॥೫॥ ನಂದನಿಗ್ರಹವೊದ ಲ್ಗೊಂಡು ಅಮಾತ್ಯನು। ಚಂದ್ರಗುಪ್ತನರಾಜ್ಯದಿ॥ ಹಿಂದಿನತೆರದಿ ನಿರ್ವಹಿಸಲುಪಾಯವ। ಇಂದುಶರ್ಮಗೆಪೇಳಲು ॥೬॥

Scanned by CamScanner

ಭಾಮಿನಿ

(ಇಂದುಶರ್ಮ) ಗುರುವೆನೀವರುಹಿರುವ ಕಾರ್ಯವ| ಅರಿತುನಾವೇ ಮಾಳ್ಪುದುಚಿತವು| ಪರಿಯನೆಲ್ಲವ ಮನನಮಾಡಿರೆ ಲ್ಯಾವುಗೈಯ್ಯದಿರೇ|| ಧರಣಿಜನ ಮಿತ್ರಘ್ನನೆನ್ನರೆ| ಹೊರಳು ಭೂಮಿಯುಎನ್ನ ನಿಮ್ಮಯ| ಶರಣನಲ್ಲವು ಎನುತಲೆರಗಿದ ನಾಗದ್ವಿಜ ಪದಕೆ ||೧||

ರಾಗ ಸೌರಾಷ್ಟ್ರ ತ್ರಿವುಡೆ

(ಚಾಣಕ್ಯ) ಈಗತೆರಳಿದೆ ಗೌಡದೇಶಕೆ| ಆಗರುವ ಪರುವತನಸೇನೆಯು| ಪೋಗುವೆನು ನಾನಲ್ಲಿಕಾರ್ಯವ| ಸಾಗಿಸುವೆನು ||೧|| ಎನುತಶರ್ಮನಿ ಗೊರೆದುಪೊರಟೆಹ| ಘನಮಹಿಮ ಚಾಣಕ್ಯಗೊಂದಿಸಿ| ತನಗೆಪೇಳಿಹಕಾರ್ಯ ಗೌರವಕಾಗಿಪೊರಟ ||೨||

ವಾರ್ಧಿಕ

ಧರಿಸಿಶರ್ಮನು ಕ್ಷಪಣವೇಷಮಂಶಿಷ್ಯರಿಗೆ| ಅರುಹಿದಂ ಮಾಸೋಪವಾಸಿ ಸಿದ್ಧಾರ್ಥಕನು| ವರವೇಗಶರ್ಮ ಸಮಿದ್ಧಾರ್ಥಕನು ಮತ್ತಾ ಪುಲೋಮ ನೆನುತಾ|| ತೆರಳಿ ಪಾಟಲಿಪುರಕೆ| ಬಾಗುರಾಯಣ ಸುಮತಿ| ಧುರಧೀರ ಭದ್ರಭಟ ಅಮಾತ್ಯ ರಾಕ್ಷಸರ| ಪರಿಚಯವಮಾಡಿ ಜ್ಯೋತಿಷ ಮಂತ್ರವೈದ್ಯಾದಿ ಸಕಲಶಾಸ್ತ್ರಜ್ಞ ರೆನುತಾ||೧||

ರಾಗ ಸಾಂಗತ್ಯ ರೂಪಕತಾಳ

ಪುರದೊಳುಬೇರೆ ಬೇರೆಡೆಯೊಳ ಗುಳಿಯುತ್ತ| ಚರಿಸಿಪಟ್ಟಣದ ವಾರ್ತೆಯನೂ|| ಅರುಹುತ್ತ ಲೊಬ್ಬರೊಬ್ಬರಿಗೆ ಸಂಕೇತದಿ| ಇರಲಿಕಾಮಾತ್ಯರಾಕ್ಷಸಗೇ ||೧|| ಪರಮಾಪ್ತನಾಗಿ ಸಿದ್ಧಾರ್ಥಕ ನಿತ್ಯದಿ| ಬರುತ ನವನಂದರ ಕಂಡು|| ವರಕುಶಲವಕೇಳಿ ತೆರಳುತ್ತ ಲಿರಲಿತ್ತ| ಪರುವತೇಶನ ಸೇನೆಯೊಳಗೆ ||೨|| ಗೂಢಚಾರರಕಂಡು ಪರುವತೇಶನದೂತ| ದೂರದಿನಿಂತು| ಶಂಖಿಸುತ|| ಸಾರಿಹತ್ತಿರದೊಳು ವೇಷಭೂಷಣದಿಂದ| ಬೇರೆಯಜನರೆಂದುತಿಳಿದು ||೩|| ನುಸುಳಿ ಪೋಗದಹಾಗೆ ಪಿಡಿದುಬಂಧಿಸುತಲಿ| ವಸುಗೆಯ ಚಂದ್ರಗುಪ್ತನಿಗೆ|| ಉಸುರಲ್ಕೆಕರಸುತ್ತ ಜೀವದಾಸೆಗಳಿರೆ| ಹುಸಿಯನಾಡದೆ ಪೇಳಿರೆನಲು ||೪|| ಗುರುತಿಹ ಚಂದ್ರಗುಪ್ತನ ನೋಡಿಭಯದಿಂದ| ಶರಣುಮಾಡುತ ನಿಮ್ಮಪುರದ|| ವರಸಚಿವರ ನೇಮದಿಂದಲಿದೇಶವ| ತಿರುಗುವ ಗೂಢಚಾರಕರೂ ||೫|| ಯನೆಕೇಳಿ ಚಂದ್ರಗುಪ್ತನುತನ್ನ ದೂತರ! ಸನಿಹಕ್ಕೆ ಕರೆಯುತ್ತಲಿವರ|| ಘನಸೇನೆಸುತ್ತಿಸಿ ಕಸೆಇಂದಪ್ರಹರಿಸಿ| ಧನಿಗರುಹಲು ದೂಡಿರೆನಲು ||೬|| ಸುತ್ತಿಸಿಸೇನೆಯ ತೋರಿಸುತವರಿಗೆ| ಹತ್ತುಪೆಟ್ಟನು ಕಸೆಇಂದಾ|| ಇತ್ತುದಂಡಿನಹೊರ ದೂಡಲು ಅವರಾಗ| ಹತ್ತಿತೇಜಿಯನೋಡಿಸಿದರೂ ||೭||

ವಾರ್ಧಿಕ

ಅನಿತರಲಿಚಾಣಕ್ಯ ಚಂದ್ರಗುಪ್ತನಬಳಿಗೆ| ಅಣಿಯಾಗಿಬಂದು ತಾನೊರದೀರ್ಪ ಕಾರ್ಯದಲಿ| ಜನಪರೇಂಸಾಧಿಸಿದ ರೆಂದುಕೇಳಿಲ್ಕಾಗ ಶೇಖರನುಪದಕಳಗುತಾ|| ಧನಿಗಳಪ್ಪಣೆಯಂತೆ ಕುಸುಮ ಪುರದರಸುಗಳ| ವನದುರ್ಗವಾಕ್ರಮಿಸಿ ತುರು ಧನಿಗಳಪ್ಪಣೆಯಂತೆ ಕುಸುಮ ಪುರದರಸುಗಳ| ವನದುರ್ಗವಾಕ್ರಮಿಸಿ ತುರು ವಿಂಡು ಕರಿವಿಂಡು| ಘನತರದಅಶ್ವಗಳ ನೆಲ್ಲವಂಶರೆವಿಡಿದು ತಂದೀರ್ಪ ರೆಂದೊರೆಯಲು ||೧||

ರಾಗ ಕೇದಾರ ಗೌಳಝಂಪೆ

ವಡನೆಹರುಷವಗೊಳ್ಳುತಾ| ಚಾಣಕ್ಯ| ಗಡಿನಾಡ ಜನರನತ್ತಾ|| ಹೊಡೆದು ಓಡಿಸಿ ಸ್ಥಳವನೂ| ಆಕ್ರಮಿಸಿ| ಬಿಡುವುದೀ ಗೊಳತೆಂದನೂ ||೧|| ಕೇಳಿಶೇಖರ ಮುಖ್ಯರೂ| ಅಪ್ಪಣೆಯ| ಪಾಲಿಸುತ ಬಹೆವೆಂದರೂ|| ಪಾಳೆಯುವ ಸಜ್ಜುಗೊಳಿಸೀ| ಗಡಿಯಜನ| ಜಾಲವನೆ ಬಡಿದೋಡಿಸೀ ||೨|| ಅಲ್ಲಿರುವ ವಸ್ತುಗಳನೂ| ಸೂರೆಗೊಳು| ತಲ್ಲಿಡುತಸೇನೆಗಳನೂ|| ಎಲ್ಲಕಡೆಯೊಳು ತಿರುಗುತ| ಶೇಖರನು ಉಲ್ಲಾಸದಿಂ ಮೆರೆಯುತಾ ||೩|| ಇರಲಿತ್ತ ಕುಸುಮಪುರದೀ| ಉತ್ಪಾತ| ಭರಿತಉಲ್ಕೆಯ ರಭಸದೀ| ನರಿನಾಯಿಗೀಳ್ಗರೆಯಲೂ| ಅಮಾತ್ಯ| ನರಿತು ಬೆಚ್ಚಿದನಾಗಲು ||೪|| (ಅಮಾತ್ಯ) ಏನಿದುತ್ಪಾತ ವಿದನೂ| ಯೋಚಿಸುತ| ನೀನರುಹು ಸುಮತಿಇದನೂ|| ಶೂನ್ಯವಾಗಿಹುದು ಮತಿಗೇ| ರಾಜ್ಯದಲಿ| ಏನುದುಷ್ಕೃತಿಯೊಕಡೆಗೇ ||೫|| (ಸುಮತಿ) ದುರಿತದುಃಖಗಳವೊದಲೂ| ಸೂಚಿಸುವ| ಪರದೈವಸೂಚಿ ಎನಲೂ|| ಪರಿಹಾರವೇನೆಂಬುದಾ| ನಾವರಿತು| ಅರುಹುವುದು ದೊರೆಯಡಿಗದಾ ||೬||

ರಾಗ ಮುಖಾರಿ ಏಕತಾಳ

ಅನಿತರೋಳ್ ಚಾರನೋರ್ವಬಂದು| ಸಚಿವರಪದಕೆ| ವಿನಮಿಸಿ ಕೈಯ್ಯಮುಗಿದುನಿಂದು|| ವನದುರ್ಗವ ಕಾಯುವಚಾರಕರ್ಕೈ| ದನಿಗಳಿಗುಪಹತಿ ಬಂದೊದಗಿಹುದೈ| ಸನಿಹಕೆಬಂದಿದೆ ಅರಿಗಳಸೇನೆಯು| ಕೆಣಕುತನಮ್ಮನು ದಂಡಿಸಿಇರುವರು ||೧|| ಗಡಿನಾಡಿ ನೊಳಗೆಇರುವಪ್ರಜೆಯ| ಅರಿಗಳುಬಡಿದು| ಕೆಡಹುತ್ತಲಿರಲುನೋಡಿಸ್ತ್ರಿಯಾ|| ವಡನಲ್ಲಿಯಜನ ವಲಸೆಯಹೋದರು| ಕಡುದುರ್ಗಮವಾಗಿಹ ದುರ್ಗಗಳನು| ಧಡಿಗರು ವಡನಲ್ಲಿಯಜನ ವಲಸೆಯಹೋದರು| ಕಡುದುರ್ಗಮವಾಗಿಹ ದುರ್ಗಗಳನು| ಧಡಿಗರು ಮುತ್ತುತ| ದೃಢದಿಂತಮ್ಮಯ| ಪಡೆಯನು ಬಲಿದಿಹ ರೊಡೆಯರೆಲಾಲಿಸಿ ||೨|| ವರಕಾಶ್ಯಪ್ರಸ್ತ ದೊಳಗೇಮೊನ್ನೆ| ಇರುತಿಹನಮ್ಮ ತುರುಗಸೈನ್ಯದ ಸಮುಹವನ್ನೇ|| ದುರುಳ ಶಕರಪಡೆ| ಕಡಿದುರುಳಿಸುತಲಿ ಸರದಾರನ ಸುತರುಗಳನುಬಂಧಿಸಿ| ಸೆರೆಯೊಳಗಿಟ್ಟರೆ ಅಲ್ಲಿಯಅಂಚಿಯ| ಹರಿಕಾರನು ಕಳುಹಿದಲೇಖನವಿದು ||೩|| ಹೊನ್ನಘಟ್ಟದ ವಳಗೇಇರುವಾ| ಮದಗಜಗಳೆಲ್ಲ| ವನ್ನೂಕೈಶರೆಯ ಪಿಡಿದುಬರುವ|| ಮುನ್ನಲ್ಲಿರುತಿಹ

Scanned by CamScanner

ಮಾವುತರುಗಳನು| ಸನ್ನೆಯಅಂಕುಶ ದಿಂದಲಿಹತಿಸುತ| ಉನ್ನತಕರಿಯನು ಕಬಳಿಸಿ ಪೋಗಲು| ಬೆನ್ನೊಡದಿಹ ಮಾವುತನಿದೊಬಂದಿಹ ||೪||

ರಾಗ ಮಾರವಿ ಅಷ್ಟತಾಳ

(ಆಮಾತ್ಯ) ಕೇಳಿದೆಯಾ ಸುಮತಿ ಕೇಳಿದೆಯಾ ||ಪ|| ಕೇಳಿದೆಯಾನೀನು ಚಾರರ ನುಡಿಯಾ ಕಾಲದಗತಿಯನ್ನು ಈಗನೋಡಿದೆಯಾ|| ತಾಳಲಿಕಾಗದ ಮನಸಿನವ್ಯತೆಯಾ| ಪೇಳುವದ್ಯಾರೊಳು ಬಂದದುಸ್ಥಿತಿಯಾ|| ಕೇಳಿ ||೧|| ಶಕ ಪಾರಸಿಕ ಶಿಂಧು ಚೀನ ಹೂಣರಿಗೂ| ನಿಕಟವಿಶ್ವಾಸವು ಪರುವತೇಶ್ವರಗೂ|| ಸಖನಾಗಿಇರುವನು ಈಗಾತನ ಮಗೇ| ಚಕಿತಗೊಳ್ಳದೆಬಿಡ ತಿಳಿದರೆಕಡೆಗೆ|| ಕೇಳಿ ||೨|| ಅರಸರೆಲ್ಲರುಕಪ್ಪ ಕೊಡುವ ರಾತನಿಗೆ| ಅರಿತರೆಬಿಡನೆಂದು ತಿಳಿಯದಹಾಗೆ|| ದೊರೆಗಳೆಲ್ಲರುಕೃತ ಸಂಕೇತರಾಗಿ| ಧುರವೆತ್ತುಬಂದರೆ ನಾವೀಗಪ್ರೋಗಿ|| ಕೇಳಿ ||೩|| ಬಂದಿಹಅರಸರ ಸೀಳಿಸಿತಂದೂ| ಮುಂದಿಹತೋರಣ ಕಂಬದೊಳಿಂದು|| ಸಂದೇಹವಿಲ್ಲದೆ ಕಟ್ಟಿಸುತವರ| ಮುಂದಿನ ಕಾರ್ಯವ ತಿಳಿಯುವೆವಿವರ|| ಕೇಳಿ ||೪||

ರಾಗ ಸುರಟಿ ಏಕತಾಳ

ಸುಮತಿ ಆಮಾತ್ಯನೊಳೂ| ಅರುಹಿದ| ಕ್ರಮವಿದೆಬದಲಿನೊಳೂ|| ದಮನವ ಗೈಯ್ಯುವೆನೆಂದರ ನೆನುತಲಿ| ಅಮಿತ ತಪಸ್ವಿಯು| ಭಾಷೆಯಗೈದಿರೆ ||೧|| ಚಂದ್ರ ಗುಪ್ತನುಪೋಗೀ|ಆತನ| ಪೊಂದಿರೆ ಧುರಕಾಗೀ|ಸಂಧಿಸಿಪರ್ವತ ರಾಯಗೆಮೌರ್ಯರ ಕೊಂದಿಹಪರಿಯನು ತಿಳುಹಿರಬೇಕೆನೆ ||೨||

(ಆಮಾತ್ಯ) ಹಿಂದವನುಪಕೃತಿಯಾ| ನಮ್ಮಿಂ| ಹೊಂದಿರೆದುಷ್ಕೃತಿಯಾ|| ಇಂದವನೆ ನದರೆ ಬುದ್ಧಿವಿಕಲ್ಪವು| ಹೊಂದಿಹು ದಿದುಧಿಟ| ವೆಂದನಾಮಾತ್ಯನು ||೩|| ಬರೆಚಾರ ಕನಾಗ| ಸಚಿವರಿ| ಗೆರಗುತ ಪದಕಾಗ| ಸರಯೂತೀರದ ಸುರಭಿ ವಾಪಿಯೊಳಿಹ| ತುರುಲಕ್ಷವ ಶರೆವಿಡಿಯೆ ಗಾಂಧಾರನು ||೪|| ಗೋಪಾಲಕರದನೂ| ತಡೆಯಲು| ವಾಪಿಯು ಸೈನ್ಯವನೂ| ಸ್ಥಾಪಿಸುತಿವರಿಗೆ ಬಡಿಬಡಿದೋಡಿಸ| ತಾಪದಿಯನ್ನಯ ಬಳಿಗೈತಂದರು ||೫||

ರಾಗ ಕೇದಾರಗೌಳ ಅಷ್ಟತಾಳ

(ಆ. ರಾಕ್ಷಸ) ತಿಳಿದಿದೆಚಾರ ಗೋಪಾಲರೆ ನಮಗೀಗ| ಬಳಲಿಬಂದಿರಿ ನೀವೀಗ|| ಛಲದಿಂದಲವರನ್ನು ದಂಡಿಸಿಲಾಯುವು| ನಿಲಯಕಟ್ಟಿಸುವೆನೆಂದ ||೧|| ಸ್ವಜನವಿರೋಧವು ದ್ವಿಜರಿಂದಕೋಪವು| ಸುಜನ ಮೌರ್ಯರ ವಧೆಯೂ|| ಬುಜಗವಕಲ್ಲಿಟ್ಟು ಕೆಣಕಿದತೆರನಾಯ್ತು| ರುಜುವಾಗ ದೆನೆಸುಮತಿ ||೨|| ಬರುತಿಹರಶ್ವ ರೋಹಿಗಳಾಗಿಈರ್ವರು| ಅರಮನೆಸನಿಹಕೆಂದು|| ಹೊರದ್ವಾರಪಾಲ ಬಂದೊಂದಿಸಿಆಮಾತ್ಯ| ಗರುಹಲು

ವಿನಯದೊಳು ||೩|| ಬಂದಿಹಗುಪ್ತ ಚಾರಕರುಆಮಾತ್ಯನ| ಮುಂದಡ್ಡ ಬೀಳುತಲಿ|| ಒಂದುಮಾತಾಡದೆ ನೆಲದಿನೀರುನೀರು| ಎಂದುಬರೆದುತೋರಿಸೆ ||೪|| ತಿಳಿದಲ್ಲಿದೂತರು ಜಲವತಂದವರಿಗೆ| ತಳಿಕಿಟ್ಟು ಕುಡಿಸಲಾಗಿ|| ಕೆಲಹೊತ್ತುಕಳೆಯಲು ಸ್ಮೃತಿಬಂದಾ ಮಾತ್ಯನೊ| ಳೊರೆದರು ದುಸ್ಥಿಯಾ ||೫||

ರಾಗ ಮುಖಾರಿ ಏಕತಾಳ

(ಗೂಡಚಾರರು) ಮಾಡೂವೆ ವೀಗಬಿನ್ನಪವನ್ನು| ಅಮಾತ್ಯರೀಗ| ನೋಡೀರಿನಮ್ಮ ಭವಣೆಯನ್ನು ||ಪ|| ರೂಢಿಯತಿರುಗುತ ಲಲ್ಲಿಯವಾರ್ತೆಯ| ಕೂಡಿಸಿತರುತಿಹ ಗೂಢ ಚಾರಕರೈ|| ಆಡೆರಹಸ್ಯವ ಅಪ್ಪಣೆಯಾದರೆ| ಮಾಡುವೆವೀಗದ ತವಸನ್ನಿಧಿಯಲಿ ||೧|| ಪರುವತ ದೇಶದೊಳಗೆಪ್ರೋಗಿ| ಅಲ್ಲಲ್ಲಿನಾವು| ಚರಿಸುತ್ತ ಜನರತಿಳಿಯಲಾಗಿ|| ಅರ ಸರಕೂಡುತ ಪರುವತರಾಯನು| ಗಿರಿವರ್ಮನಧುರ ಪೆರಸಿಯೆ ಪೊರಡಲು| ಪರಸಿದ್ಧತೆ ಯನು ಗೈಯ್ಯುವಸಮಯಕೆ| ಬರುತೀರ್ವರುಆದ| ತಿರುಗಿಸಿಬಿಟ್ಟರು ||೨|| ಅತ್ತಪೋ ಗುವ ಸೈನ್ಯವನ್ನು| ನಮ್ಮಯಮಾರ್ಗ| ಕಿತ್ತ ತಿರುಗಿಸಿಬಂದುದನ್ನು| ಗುಪ್ತದಿತಿರುಗುತ ಸೇನೆಯಮೊತ್ತವ| ಚಿತ್ತದಿಎಣಿಸುತ ಬರುತಿರೆಗುರುತಿಸಿ| ಭೃತ್ಯರುಪಿಡಿಯುತ ದಣಿ ಬಳಿಗೊಯ್ಯಲು| ಚಿತ್ತವುಕದಡಿತು ಹತ್ತಿರಪೋಗಲು ||೩|| ಪರಚಂದ್ರಗುಪ್ತ ಚಾಣಾಕ್ಯರನೂ| ಕಾಣಿಸಲವರ| ಗೊರೆದೇವುನಮ್ಮ ಪರಿಚಯಗಳನೂ|| ಪರಮದಯಾಳುವು ಕಸೆಯಿಂದಂಡಿಸಿ| ಹೊರಡಿಸಿ ಸೇನೆಯಿಂ| ದೊರೆಯಲು ಅಂತೆಯೆ| ಚರರೆಮ್ಮನು ಸುತ್ತರಿಸುತದಂಡನು| ತಿರುಗಿಸಿ ಹೊರದೂಡಲು ನಾವ್‌ಬಂದೆವು ||೪|| ದಿನವುಹನ್ನೆರಡ ರಿಂದನಮಗೆ| ಆಹಾರನಿದ್ರೆ| ಕನಸಿನೊಳಿಲ್ಲ ದಾಗೆಧನಿಗೇ|| ಮನವರಿಕೆಯ ಮಾಡಲು ನಾವ್‌ತ್ವರಿತದಿ| ಜನುಮದಭೂಮಿಗೆ ಬಂದೆವುಅರಿಗಳ| ಘನಸೇನೆಯುಶತ ಲಕ್ಷಕು ಮಿಂದೆ| ಸನಿಹದದುರ್ಗಗ ಳೈದನುಪಿಡಿದರು ||೫||

ರಾಗ ಕೇದಾರಗೌಳ ಝಂಪೆ

ಚಾರಕರನುಡಿಕೇಳುತಾ| ಆಮಾತ್ಯ| ಭೂರಿಕೋಪವತಾಳುತಾ|| ಪೋರಬಂದನೆಅರಸರಾ| ಸಂಘಟಿಸಿ| ಸೇರಿದರೆ ದುರ್ಗವವರಾ ||೧|| ಸಾಮದಾನಗಳನುಳಿದೂ| ದಂಡದಿಂ| ನೇಮದಿಂ ಭೇದವಿಡಿದೂ|| ಸ್ವಾಮಿಕಾರ್ಯವನೆ ಜವದೀ| ಅರಿಶಿರವ|ಭೂಮಿ ಗಿಳಿಸುವೆನು ಭರದೀ ||೨|| ಕರಸಿನಂದರಿ ಗರುಹುತಾ| ಭಟರೊರೆದ| ಪರಿಯನೆಲ್ಲವ ತಿಳುಹುತಾ|| ಗಿರಿದುರ್ಗವನಗಳನ್ನೂ| ಕರಿತುರುಗ| ತುರುವಿಂಡ ಪಿಡಿದುದನ್ನೂ ||೩|| ಅರಸುಪುರದೇಶಗಳಿಗೇ| ಗ್ರಹಬಲವು| ಸರಿಇಹುದೆ ನೋಳ್ಪಬಗೆಗೇ|| ಸರಿಯಾದ ಜ್ಯೋತಿಷ್ಯರ| ಕರೆಸುತ್ತ|ಅರಿಯಬೇಕೀಗವಿವರ ||೪||ಇರಲಿಆಮೋಲಕಹುದೂ|ಪ್ರಕೃತದಲಿ| ಅರಸರನು ಬರಮಾಳ್ಪುದೂ|| ತ್ವರಿತಕಾರ್ಯದಭಾಗವೂ| ಬಹಳಿಹುದು| ಬರವಣಿಗೆಮೊದಲಾದವೂ ||೫||

Scanned by CamScanner

ವಾರ್ಧಿಕ

ಕರೆಸಿಶಾಸನಲೇಖ ಕರನುಅಮಾತ್ಯಕಂ। ಬರೆವಪತ್ರಗಳೀಗ ಬಹಳುಂಟು ಕಾಗದವ। ಕರದಿಕೊಳ್ಳಿರಿಎಂದು ಪೇಳುತಿರೆಪ್ರತಿಹಾರಿ ಬಂದುಅಮಾತ್ಯಗೆರಗೀ॥ ಹೊರದ್ವಾರದೊಳಗೆ ಕ್ಷಪಣಕರು ಬಂದೀರ್ಪರೆಂ। ದೊರೆಯೆ ಕಳುಹಿಸುಎನಲು ಪೋಗಿ ತಿಳುಹಲ್ಕಾಗ। ಪರವಸ್ಯಮಂತ್ರ ಜ್ಯೋತಿಷ ವಾದನೀತಿಜ್ಞ। ಜೀವಸಿದ್ಧಿಯು ಬಂದನೂ ॥೧॥

ರಾಗ ಕೇದಾರಗೌಳ ಅಷ್ಟತಾಳ

(ಅ.ರಾಕ್ಷಸ) ನೆನೆದಂತೆಬಂದಿರಿ ಕ್ಷಪಣಕರೇಎಂದು। ಮಣಿಯುತ್ತಲಾಮಾತ್ಯನೂ॥ ಮನಕೆಹರುಷವಾಯ್ತು ಕುಶಲವೆಮಂಡಿಸಿ। ರೆನುತಪೀಠವನಿತ್ತನು ॥೧॥

(ಕ್ಷಪಣಕ) ಧರ್ಮಿಷ್ಟರಿಗೆ ಶ್ರೇಯೋಅಸ್ತುಎನ್ನುತಲಾಗ। ಶರ್ಮನುಪರಸುತ್ತಲೀ॥ ತಮ್ಮದರ್ಶನವಿಲ್ಲ ನಾಲ್ಕುದಿವಸದಿಂದ। ನೆಮ್ಮದಿಕೊರತೆಏನ್ನೈ ॥೨॥

(ಅ-ರಾ) ಅರಸುಕಾರ್ಯಗಳ ವತ್ತಡದಿಂದತಮ್ಮನು। ಕರೆಸಲಿಕಾಗಲಿಲ್ಲ॥ ಮರೆವು ದುಂಟೇನೀವು ಅರಿತು ಬಂದುದಕಾಗಿ। ಹರುಷವಗೊಂಡಿಹೆನು ॥೩॥

(ಕ್ಷಪಣಕ) ಸಂಗರಹಿತರಾಗಿ ವನವಾಸಕ್ಯೋಗ್ಯರು। ವಿಂಗಡದೊಳಗೀರ್ಪರು। ತಂಗಿ ದೆವಿಲ್ಲಿ ನಿಮ್ಮುಪಚಾರದಿಂದಲಿ। ಭಂಗವಾಯಿತುವಮೌನವು ॥೪॥ ತಮ್ಮಉಪೇಕ್ಷೆಯು ನಮ್ಮಧರ್ಮವುಹಾನಿ। ಸುಮ್ಮನೆ ಇರುವುದೇಕೆ॥ ನೆಮ್ಮದಿಯಾಗುವ ವನಕೆನಾವ್ ಪೋಗಲು। ಸಮ್ಮತಿಸುವುದೆನಲು ॥೫॥

(ಅ-ರಾ) ಶಿವಶಿವತಮ್ಮನುಪೇಕ್ಷಿಸಿದವರಲ್ಲ। ತವಪಾದ ಸಾಕ್ಷಿಯಾಗಿ। ಅವಿರತನೆನೆ ಯುತ್ತಲಿರುವೆನುಪೇಳಿರಿ। ಭವಿತವ್ಯಪ್ರಶ್ನೆಯನು ॥೬॥

ರಾಗ ಸುರಟಿ ಏಕತಾಳ

(ಕ್ಷಪಣಕ) ಆತನಭಾವವನೂ। ತಿಳಿಯುತ। ನೀತಿಯ ಕೋವಿದನೂ॥ ಭೂತಳ ಕಭಿ ಮುಖನಾಗುತಯೋಚಿಸಿ। ಪ್ರೀತಿಯೊಳ್ಪೇಳ್ವೆ ನಾಮಾತ್ಯರೆಲಾಲಿಸಿ ॥೧॥ ಕೇಳಿದಪ್ರಶ್ನೆ ಯನೂ। ಲಗ್ನಕೆ। ತಾಳೆಯ ನೋಡಿದೆನೂ॥ ಪೇಳುವುದೇನ್ನೈ ರಾಜ್ಯಾತಂಕವು। ಮೇಲಿ ದೆಶತ್ರುಗ ಳಾಗಮತೋರ್ಪುದು ॥೨॥ ಇಹಲಗ್ನಕೆಶತ್ರೂ। ಸ್ಥಾನದ। ಗ್ರಹವಾಗಿಹ ಶತ್ರೂ। ಗ್ರಹನೋಡುವ ನದರಿಂದಲಿ ನಿಮ್ಮಮೇ। ಲ್ಬಹಶತ್ರುವುಜೀವಂತದಿಪೋಗನು ॥೩॥ ಕೆಲಸದಕೊನೆಯಲ್ಲೀ। ಜಯುವಿದೆ। ಸುಲಭದಶ್ರಮದಲ್ಲೀ॥ ಬಲುಮೆಯು ಬುಧಾ ದಿಪಂಚಗ್ರಹಗಳು। ಸಲೆಭೇದದಫಲ ಪ್ರದರಾಗಿರುತಿರೆ ॥೪॥ ಶತ್ರುವಸಹಕರಿಸೀ। ಬಂದಘ। ರಿತ್ರೀಶರುಶ್ರಮಿಸೀ॥ ಕರ್ತವ್ಯದಿ ಭೇದವಗೈಯ್ಯಲುವಶ। ವರ್ತಿಗಳಾಗಲು ದಂಡದಿಹತಿಪರು ॥೫॥

ವಾರ್ಧಿಕ

ಮನದಿಚಾಣಕ್ಯನಾ ಸಂಕೇತವಚನಮಂ। ನೆನೆದುಅಮಾತ್ಯರೇ ಪೇಳಿದುದು ತವಮನಕೆ।ಮುನನನಾಗಿರೆ ನದೀತೀರದಲಿಜಪಶೀಲ ರಾಗಿರ್ಪದ್ವಿಜರಮುಖದೀ॥ ಘನತ ರ್ಪಣದಿಂದಲೀ ಲಗ್ನದೊಳಗೆಸೀವ್।ಶನಿಅನಿಷ್ಟಗಳಪರಿ ಹಾರಾರ್ಥಮಾಗಿಯುಂ।ಸನಿ ಹಬಂದಿಹ ಶತ್ರುನಾಶಾರ್ಥಮಾಗಿಯುಂ। ಜಪವನಾರಂಬಿಸುವುದೂ ॥೧॥

ರಾಗ ಬೇಗಡೆ ಅಷ್ಟತಾಳ

ಕ್ಷಪಣಕರೆ ನೀವ್‌ಪೇಳಿದರ್ಥವನೂ। ಅರಿತೀರ್ಪೆ ನಿಮ್ಮಯ। ಅಪರಿಮಿತ ಜ್ಯೋತಿಷ್ಯಮರ್ಮವನೂ॥ ತಪದಶಿದ್ದಿಯೊ ಳಳವಡಿಸಿಬಹು। ಉಪಕೃತಿಯ ನೆಸಗಿದಿರಿ ಇಲ್ಲಿಯೆ। ಜಪದಮಂದಿರ ರಚಿಸಿಕೊಡುವೆನು। ಸುಫಲವಾಗುವ ತಪವಗೈವುದು ॥೧॥ ಪುರದಹೊರಗಡೆ ಪರ್ಣಕುಟಿರವನೂ। ರಚಿಸಿದರೆ ಪೋಗುತ। ಅರಸುಗಳ ಶ್ರೇಯೋಭಿ ವೃದ್ಧಿಯನೂ॥ ಕುರಿತುತಪವಾಚರಿಪೆವಲ್ಲದೆ। ಅರಿತವರು ಲೌಕಿಕದೊಳಿರುವರೆ। ಪರದ ಗತಿಯನು ಸಾಧಿಸದೆಭವ। ಶರಧಿಯೊಳುಮುಳು ಮುಳುಗಿಏಳ್ವರೆ ॥೨॥ ಕಣ್ಣುಗಳ ಮುಚ್ಚುತ್ತ ಕ್ಷಪಣಕನೂ। ಧ್ಯಾನಾಸಕ್ತ। ನೆನ್ನುವಂದದಿ ಕುಳಿತುಮೌನವನೂ॥ ಮುನ್ನಕಾರ್ಯದ ಪ್ರಗತಿಗೋಸುಗ। ತನ್ನೊಳಗೆ ಯೋಚನೆಯಗೈಯುತ। ಲಿನ್ನು ಸಾಧಿಪ ಕಾರ್ಯವಿರ್ಪುದು। ಎನ್ನುತಿರೆ ಆಮಾತ್ಯನಿತ್ತಲು ॥೩॥ ಬಾಗುರಾಯಣನನ್ನು ಕರೆಸುತಲೀ। ಸೇನಾಧಿಪತಿಯೇ। ಈಗಪರುವತ ರಾಯನಸನಿಹದಲೀ। ಆಗರುವ ಪೌರ್ಯ ಕನಪಕ್ಷದಿ। ಸಾಗಿಸೇನೆಯ ಕೂಡಿಬಂದಿಹ। ರಾಗುತಿದೆ ದುಃಶಕುನಪುರದೊಳು। ಬೇಗ ಶಾಂತಿಯಗೈಸಬೇಕೆನೆ ॥೪॥ ನದಿಯತೀರದಿ ಹೋಮಶಾಲೆಯನೂ। ರಚಿಸುತ್ತ ಬೇಗದಿ। ವದಗಿಸುತಸಾಮಗ್ರಿಯಂಗಳನೂ॥ಬುಧರೊಳ್ ಜಪಶೀಲರನೆಕರೆಸುತ। ವಿಧಿಯಪೂರ್ವಕ ಅರಿಪಲಾಯನ। ಕಧಿಕಹೋಮವು ಜಪವು ತರ್ಪಣ। ಕಿದುವೆಲಗ್ನದಿ ಮಾಡಿ ಸೆಂದನು ॥೫॥

ರಾಗ ಕೇದಾರಗೌಳ ಅಷ್ಟತಾಳ

ಬಾಗುರಾಯಣನು ಆ ರ್ತ್ವಿಜರನ್ನು ಹುಡುಕುತ್ತ। ಪೋಗುವಸಮಯದೊಳು॥ ಸಾಗಿಬಂದನು ಸಿದ್ಧಾರ್ಥಕ ನೆಂಬವೈದ್ಯನು। ಬಾಗಿವಂದಿಸುತೆಂದನು ॥೧॥ ಎತ್ತಣ ಪಯಣವೊ ಸೈನ್ಯಾಧಿಪತಿಗಳೆ। ಗಿತ್ತಔಷಧದಿಂದಲೀ॥ ಸುಸ್ತುಪೋಗಿರುವಂತೆ ಕಾಂ ಬುದು ಮುಖದಲ್ಲಿ। ಉತ್ತಮ ಕಳೆತುಂಬಿದೆ ॥೨॥ ವೈದ್ಯರೆತಮ್ಮಯ ಔಷದದಿಂದಲಿ। ಸಧ್ಯಕ್ಕೆಪಾರಾದೆನೂ॥ ಬುದ್ಧಿವಂತಾರ್ತ್ವಿಜ ರೀಗೊಬ್ಬರರಸಲು। ಎದ್ದು ಬಂದೆನು ಇಲ್ಲಿಗೇ ॥೩॥

(ಸಿದ್ಧಾರ್ಥ) ಅವಕಾರ್ಯಕೆ ಬೇಕೆಂಬುದನು ನೀವರುಹಲು। ಕೋವಿದರನುಅರಸೀ॥ ತಾವುಸೂಚಿಸಿದಲ್ಲಿ ಗವರನ್ನು ಕಳುಹುವೆ। ಸೇವೆಗಪ್ಪಣೆಎಂದನು ॥೪॥

(ಬಾಗುರಾಯಣ) ಶತೃಪಲಾಯನ ಜಪಹೋಮಗಳನೀಗ। ನಿತ್ಯದಿ ಗೈಯ್ಯಬೇಕು॥ ಪತ್ತನದೊಳಗೆ ಅನಿಷ್ಟವು ತೋರ್ಪುದು। ಮಿತ್ರನೆಕೇಳೆಂದನು ॥೫॥

(ಸಿದ್ಧಾರ್ಥ) ಗಂಗಸರಯುನದಿ ಸಂಗಮಪೂರ್ವಕೆ। ವಿಂಗಡಸ್ಥಳಗಳಲ್ಲಿ॥ ಸಂಗರಹಿತರಾದ ಜಪಶೀಲದ್ವಿಜರೆಲ್ಲ। ತಂಗಿಕಾರ್ಯವಗೈಯ್ಯಲು ॥೬॥ ಸದ್ಯಃಫಲವುಬಹು ವೃದ್ಧಿದಾಯಕವೆಂದು। ವಿದ್ಯಾವಂತರು ಪೇಳ್ವರು॥ ಸಿದ್ಧಿದಾಯಕವಾದ ಸ್ಥಳವನ್ನು ತಿಳಿಸಿದೆ। ಬುದ್ಧಿವಂತರೆಗೈಸಿರಿ ॥೭॥

ವಾರ್ಧಿಕ

ಸಿದ್ಧಾರ್ಥಕನಮಿತ್ರ ಮಾಸೋಪವಾಸಿಪರಿ। ಶುದ್ಧಮುನಿವೇಷದಿಂ ಕರಕಮಂಡಲದಂಡ। ರುದ್ರಾಕ್ಷಿಮಾಲೆಯಂ ಧರಿಸಿಮಾರ್ಗಸ್ತರಂತೈದುತಿರೆ ನೋಡುತವರ॥ ವೈದ್ಯವೇಷಿಯು ಇದೇನಾಶ್ಚರ್ಯ ವಿವರಿಲ್ಲಿ।ಹೆದ್ದಾರಿಯಂಪಿಡಿದು ಪೋಗುವರು ಎಂದೆನುತ। ಶ್ರದ್ಧೆಯಿಂನಮಿಸುತಿರೆ ದೂರದಲಿ ಪ್ರಶ್ನಿಸಿದ ಬಾಗುರಾಯಣವೈದ್ಯಗೇ ॥೧॥

ರಾಗ ಕೇದಾರಗೌಳ ಅಷ್ಟತಾಳ

ಕೇಳಿದನಿಮಗೆಲ್ಲಿ ಗುರುತಿವ ರ್‍ಯಾರೆಂದು। ಪೇಳಿದವೈದ್ಯನಾಗ॥ ಕೇಳಿರಿಮಾಸೋಪವಾಸಿ ಮುನೀಶ್ವರ। ಲೀಲೆಇಂಪೋಗುವರು ॥೧॥ ಕರೆಯುತ್ತಲಿವರನ್ನು ಉಪಚರಿಸುತ್ತಲಿ। ಅರಿಪಲಾಯನಜಪಕೇ॥ ಬರಬೇಕುನೀವೆಂದು ಬೇಡಿಕೊಳ್ಳಿರಿನಾನೂ। ಅರುಹೂವೆ ವಿನಯದಲಿ ॥೨॥

(ಬಾಗುರಾಯಣ) ವೇಗದಿಂದೋಡುತ್ತ ಮುನಿಪನಪಾದಕ್ಕೆ। ಬಾಗುರಾಯಣನಮಿಸೀ॥ಯೋಗೀಶದಯಮಾಡಿಬರಬೇಕು ಜಪಹೋಮ।ಕಾಗಿಅರ್ತ್ವಿಜಕೆಂದನೂ॥೩॥

(ಮಾಸೋಪವಾಸಿ) ನೀವ್ಯಾರು ಜಪಹೋಮ ವ್ಯಾಪಕಾರ್ಯಾರ್ಥದಿ।ನಾವಿಲ್ಲಿಪೋಪುದನ್ನು॥ ತಾವೆಂತುತಿಳಿದಿರಿ ಪೇಳಬೇಕೆನುತಲಿ। ಠೀವಿಯಿಂ ಕೇಳಿದನೂ ॥೪॥

(ಬಾಗುರಾಯಣ) ನವನಂದ ರೀಗೆಮ್ಮ ಅರಸರು ಪುರಕೀಗ। ಭವಣೆಯು ಅರಿಗಳಿಂದ॥ ತವಕದಿ ಶತೃಪಲಾಯನ ಜಪಹೋಮ। ದವುಸರವಿರುವುದೆಂದ ॥೫॥

(ಮಾಸೋಪವಾಸಿ) ಕಷ್ಟವನೋಡಿಪೋಗಲಿ ಕಾಗದೀಗೆನ್ನು। ನಿಷ್ಟೆಯನನುಸರಿಸೀ॥ ಶ್ರೇಷ್ಠದಧಿಯುಘೃತ ತಿಲಚರು ಸಮಿಧೆಯ। ವಟ್ಟುಗೂಡಿಸಿರೆಂದನು ॥೬॥

ವಾರ್ಧಿಕ

(ಬಾಗುರಾಯಣ) ಮುನಿಪನಂಸಂತೈಸಿ ಹೋಮಶಾಲೆಯರಚಿಸಿ। ಘನವಾದಅಗ್ನಿಕೊಂಡವ ಗೈಸಿರುತ್ವಿಜರ। ಮನಕೊಪ್ಪುವಂತೆ ಸಾಮಗ್ರಿಯನೊದಗಿಸುತ ಕಳುಹಿದಂ ಜಪಶಾಲೆಗೆ॥ ತನಗಾಪ್ತದೂತರಂ ನೇಮಿಸಿದ ಕಾವಲಿಗೆ। ಅಣಿಯಾದ ಸಕಲಸಂಭಾ

ರದಿಂ ಹೋಮಜಪ। ಜನರಿಗಾಶ್ಚರ್ಯಮಪ್ಪಂದದಿಂ ಗೈಯ್ಯುತಿರಲಿತ್ತಲಾಮಾತ್ಯನೊಡನೇ ॥೧॥

ರಾಗ ಕೇದಾರಗೌಳ ಅಷ್ಟತಾಳ

ಕೇಳಿದರಾಗ ಲೇಖಕರೀಗಬರೆವುದ। ಪೇಳಬೇಕೆಂದೆನಲು॥ ಆಲೋಚನೆಯಗೈಯ್ಯು ತಾಮಾತ್ಯನುಸುರಿದ। ಪೇಳುವೆಬರಿಯಿರೆಂದು ॥೧॥ ಮೊದಲುದಕ್ಷಿಣದೇಶದೊಳಗಿಹಸೇನೆಯು। ವದಗದಲ್ಲದೆನಮಗೇ॥ ಅಧಿಕಸೇನೆಯಕೂಡಿ ಬಂದಿಹ ಅರಿಗಳ। ಚದುರಿಸಲಾಗದೀಗ ॥೨॥ ತ್ವರಿತದಿಬರುವಂತೆ ಸೇನ ನಾಯಕನೀಗೆ। ಬರೆಸುತ್ತಪತ್ರವನ್ನು॥ ಚರನಕೈಯ್ಯೊಳು ಕೊಟ್ಟು ಕಳುಹುತ್ತ ಪೊದಲಿಗೆ। ಅರುಹಿದನಾಮಾತ್ಯನು ॥೩॥

ವಾರ್ಧಿಕ

ಅರಸನಾಗಿಹ ದಶಾರ್ಣ ದೇಶಾಧಿಪಗು' ವರಶೂರಸೇನಾಧಿ ಪಾಲಕಗು ಲೇಖನವ। ಬರೆವುದೈನಮ್ಮ ಹೆಸರಿಂದಕುಶಲವಕೇಳಿ ಸಾಂಪ್ರತಿಯನಿತ್ತುಬಳಿಕಾ॥ ಪರುವತೇಶ್ವರನಿಂಗು ನಿಮಗು ಹಿಂದೊದಗಿರುವ।ಧುರದಸಮಯದಿನಾವು ಮಧ್ಯವರ್ತಿಗಳಾಗಿ। ಪರಿಹರಿಸಿ ಜಗಳವಂ ಉಭಯುತರಕ್ಷೇಮವಂ। ಬಯಸಿಹುದು ನಿಜವಾಗಿರೇ ॥೧॥

ರಾಗ ಕೇದಾರಗೌಳ ಅಷ್ಟತಾಳ

ಪರುವತರಾಯನು ಬಂದಿಹನಮ್ಮೊಳು। ಧುರಕಾಂಕ್ಷೆಇಂದಲೀಗ॥ ಮರೆತುಪಕಾರವ ದಂಡೆತ್ತಿನಮ್ಮಯ। ಪುರದಹತ್ತಿರಕವನು ॥೧॥ ಆತನಚೆಂಡ ನೀಡಾಡುತ್ತರಣದಲ್ಲಿ। ಭೂತಪಿಶಾಚಿಗಳ್ಗೆ॥ ಔತಣಬಡಿಸದೆ ಬಿಡೆವು ನಾವದರಿಂದ। ಪಾತಕವೆಮಗಿಲ್ಲವು ॥೨॥ ನಿರುತನಮ್ಮಯ ಮಿತ್ರ ರಾದುದುನಿಜನಿರೆ। ತೆರಳಿಸೇನೆಯಸಹಿತಾ॥ ಪರುವತರಾಯನ ಶಾಹುರಿನಗರದ। ಗಿರಿದುರ್ಗವನುಬೇಗದಿ ॥೩॥ ಕರಗತಮಾಡಿ ಕೊಂಡಲ್ಲಿಯಸೇನೆಯು। ಬರವಂತೆನಮ್ಮಲ್ಲಿಗೇ॥ ಧುರವ ನೆಸಗೆನೀವು। ಬರುವಸಂಪದವೆಲ್ಲ ನಿರುತನಿಮ್ಮದು ಎನ್ನುತ್ತ ॥೪॥ ಬರೆಸಿಅಶ್ವಾರೋಹಿ ಯೊಡನೆ ಕಾಗದವನ್ನು।ತ್ವರಿತದಿಕಳುಹಿರೆಂದು॥ ಅರುಹುತ್ತ ಸುಮತಿಗೆ ಮನದಲ್ಲಿಯೋಚಿಸಿ। ಒರೆದನುಲೇಖಕಗೇ ॥೫॥ ಕೆಲಗೂಡನುಂತ್ರಿಗ ಳ್ನಮ್ಮಸಂಬಳತಿಂದು। ಹಲವುರಾಜರ ನೊಲಿಸಿ॥ ಒಳಗುಟ್ಟತಿಳಿಯುತ್ತಲಲ್ಲಿ ವರ್ತಕರಾಗಿ। ನೆಲೆಯನರಿತುಪೇಳ್ವರು ॥೬॥ ಧನಗುಪ್ತ ಕೃಷ್ಣದಾಸನು ಹೀರದಾಸನು। ವಣಿಜನು ವಜ್ರಲಾಲ॥ರೆನುವರಿಗೀಗ ನಮ್ಮ ಸರಿಲಿಕಾಗದ ವನುನೀವು ಬರೆಯುವುದು ॥೭॥ ಇಂದುನಂದರವೈರಿ ಚಂದ್ರಗುಪ್ತನಪಕ್ಷ। ದಿಂದಲಾ ಪರುವತನೂ॥ ಮಾದುಗೂಡುತಲಾತ ಸಾಮಂತರರಸರ। ಬಂದೀರ್ಪ ಧುರಕಾಗಿಯೆ ॥೮॥ ನಿಮಗೆ ಆಶ್ರಯಭೂತ। ರಾಗಿಹ ಅರಸರ। ಸಮಯವಸಾಧಿಸುತ॥ ನಮಗಾಪ್ತರಾಗುವ ತೆರ

Scanned by CamScanner

ದೊಳು ಭೇದವ| ಕ್ರಮದಿಂದಗೈಯುತಲೀ ||೯|| ಧನವೆಷ್ಟುವ್ಯಯವಾದ ರನಿತುಚಿಂತೆ ಗಳಿಲ್ಲ| ಧನಹೀನಚಾಣಿಕ್ಯನ|| ಮನವನೊಲಿಸಿಬಂದ ಚಂದ್ರಗುಪ್ತನಕೊಂದು| ಕೆಡ ಕುತ್ತಪರುವತನ ||೧೦||

ರಾಗ ಬೇಗಡೆ ಅಷ್ಟತಾಳ

(ಅ-ರಾ) ನಮ್ಮಪಕ್ಷಕೆ ಬರಲುಯತ್ನವನೂ| ಮಾಡುವುದು ನೀವುಗ| ಳೊಮ್ಮೆವಪ್ಪದೆ ಇರ್ದಡವರನ್ನೂ|| ತಮ್ಮದೇಶಕೆಏಕಕಾಲದಿ|ಸೈನ್ಯಸಹಿತಲಿ ಪೊರಟುಪೋಗಲಿ| ಸಮ್ಮತಿಯ ಕೊಡದಿರಲುಯುದ್ಧದಿ| ಸುಮ್ಮನಲ್ಲಿಯ ಸುದ್ದಿ ತಿಳುಹಲಿ ||೧|| ಮುಂದಕೊದಗುವ ಯುದ್ಧಸಮಯದಲೀ| ದೇಶಾಧಿಪಾಲರು| ಬಂದುಗಡಿದುರ್ಗವನೆ ಹೊಂದಿರಲಿ|| ನಂದರೊಳು ಕೈಮಾಡದಂದದಿ| ಹೊಂದಿಸುತ ಅರಸುಗಳನೆಲ್ಲರ| ಸಂಧಿನೆಪದಲಿ ಕಾಲಕಳೆದರೆ| ಕೊಂದುಪರುವತನನ್ನು ಕಳೆವೆವು ||೨||

ಭಾಮಿನಿ

ಪರುವತೇಶನ ಪಕ್ಷದೊಳಗಿಹ| ಅರಸುಮಕ್ಕಳಿಗರುಹಿನಮ್ಮಯ| ಧರಣಿಯಲಿ ಆತನಸಮಾಧಿಯಮಾಡುತಾಬಳಿಕ|| ಭರಿತವಾಗಿಹ ಶಾಹುರೀಪುರ| ವರಕೆಸೇರಿದ ದೇಶಸಹಿತಲಿ| ಸರಿಯೊಳ್ಹಂಚುತ ಕೊಡುವೆ ವೆನ್ನುತ| ಬರೆದುಕೊಡಿರೆಂದಾ ||೧||

ರಾಗ ಸೌರಾಷ್ಟ್ರ ತ್ರಿವುಡೆ

ಲೇಖಕರುಹೆಸರಿನಿಸಿಬರೆಯುತ| ಥಾಕುಗಳ ನಾಮಾತ್ಯಗಿತ್ತರು| ಹಾಕುತಲಿ ಮುದ್ರೆಯನು ತುಂಬಿಲಕೋಟಿಯೊಳಗೇ ||೧|| ಬರೆಸಿಅವರವರ್ಹೆಸರಮೇಲ್ಗಡೆ| ಕರಸಿದನುಚಾರಕ ಚತುಷ್ಟಯ| ಕೊರದಗೈಯ್ಯುವ ಹದನವೆಲ್ಲವ| ತ್ವರಿತದಿಂದ ||೨|| ಪರುವತನಸೇನೆಯಲಿಗುಪಿತದಿ| ತೆರಳಿಲೇಖನಗಳಲಿಮೇಲಕೆ| ಬರೆದಹೆಸರಿನ ಜನರಗುರುತಿಸಿ ಕೊಡುತಮತ್ತೆ ||೩|| ಉತ್ತರವಲಿಖಿತದೊಳು ತರುವುದೆ| ನುತ್ತಲಪ್ಪಣೆಇತ್ತು ಕಳುಹಲು| ಹತ್ತಿತುರುಗವ ನವರುಪೋಗಲಿ ಕಿತ್ತಬಳಿಕ ||೪|| ವರಸಮಾದಿಯೊಳಿರುವ ಕ್ಷಪಣಕ| ಹರಹರಾಭುದ್ದೇಶ ನೆನುತು| ಚ್ಚರಿಸಿನಟನೆಯತೋರುತಿರಲಾಮಾತ್ಯ ನಾಗ ||೫|| ಜೀವಸಿದ್ಧಿಗ ಳೇಕೆಬಿಕ್ಷಕೆ| ಸಾವಧಾನಗ ಳಾಯ್ತೊವೇಳೆಯು|ತಾವರಿಯ ದಂತೈದಿತೀದಿನ| ವೆನಲಮಾತ್ಯ ||೬||

ಭಾಮಿನಿ

(ಕ್ಷಪಣಕ) ಜೀವರಕ್ಷಣೆಗಾಗಿಭಿಕ್ಷವು| ನಾವುಸರ್ವವ ಬಿಟ್ಟವರುಮುದ| ವ್ಯಾವುದರೊಳಡಗೀರ್ಪುದೆನ್ನುತ| ತಿಳಿದಬಳಿಕೆಮಗೇ|| ಆವಆಸೆಯುಇಲ್ಲವೀಜಗ| ಜೀವಿಗಳ ಪರಿಎಂದುನಮ್ಮನು| ಭಾವಿಸುವಿರೇಎನುತಲುಭಯರು ಪೊರಡೆಕ್ಷಪಣಕನು ||೧||

ರಾಗ ಸುರಟಿ ಏಕತಾಳ

(ಕ್ಷಪಣಕ) ಭೇದೋಪಾಯವನೂ| ರಾಕ್ಷಸ| ನೀದಿನಗೈದಿಹನೂ|| ಐದಿಪಚರರಾ ಪರ್ವತಸೇನೆಗೆ| ಪೋದರೆಕಾರ್ಯವ| ಸಾಧಿಸದುಳಿಯರು ||೧|| ಗುರುಚಾಣಿಕ್ಯರಿಗೆ| ವರಶಿಷ್ಯನ ವಿಷಯವು| ಅರಿವಾಗುವಹಾಗೆ|| ಬರೆಯುತಪತ್ರವ ಮುಂಚಿತವಾಗಿಯೆ| ವರಶಿಷ್ಯನ ಮುಖ ದಿಂದಲಿಕಳುಹುವೆ ||೨|| ನಡೆದಿಹುದೆಲ್ಲವನೂ| ಲಿಖಿತದಿ| ಬಿಡದೆ ವಿವರಿಸಿದನೂ|| ತಡೆಯದೆಕರೆಯುತ ಪತ್ರವಶಿಷ್ಯಗೆ| ಕೊಡುತಿದ ಗುಪಿತದಿ ಮಡಿಲೊಳಗಿರಿಸುತ ||೩|| ಚಾಣಿಕ್ಯರಿಗಿದನೂ| ತಲುಪಿಸಿ| ಜಾಣತನದಿನೀನು|ಏನನುವರಿದರು ಶ್ರದ್ಧೆಯೊಳೆಸಗಿಪ್ರ| ವೀಣನು ನೀನಾ ಗಿಲ್ಲಿಗೆ ಬಂದರೆ ||೪||ವಾದವಿದ್ಯೆಯಕಲಿಸೀ| ನಿನಗಿದೊ| ವೇದವಿದ್ಯೆಯ ಮುಗಿಸೀ|| ಸಾಧಿಪವೇದಾಂತವನೆನಾ ತಿಳುಹುತ| ಆದರದಿಂದಲಿ ನೋಡುವೆನೆಂದನು ||೫||

ವಾರ್ಧಿಕ

ಪರಿಕಿಸಾಮಂಟಪದ ಕಡೆಯೊಳಗೆಕಟ್ಟಿರುವ| ತುರುಗಕಣಿಮಾಡಿಹರು ತಂದದರ ಹಣೆಗೀಗ| ಇರಿಸುತೀಕಾಡಿಗೆಯ ನಿನ್ನಫಣೆಯೊಳಗಿಡುತ| ಅಶ್ವಮುಂಏರಿತೆರಳೆ|| ಪರರಿಂಗೆಕಾಣಿಸದು ಚೂರ್ಣವಿದ ಉದುಕದೊಳ್| ಬೆರೆಸಿಕುಡಿಯುತ ಹರಿಗೆನೀಂಟೆಸಲ್ ಪಕ್ಷವೊಂ| ದಿರದುಹಶು ತೃಷೆದಣಿವುನಿದ್ರೆ ಮೊದಲಾದವೆಂ| ದೊರೆದನಾ ಶಿಷ್ಯನೊಡನೇ ||೧||

ರಾಗ ಕೇದಾರಗೌಳ ಅಷ್ಟತಾಳ

ವೇಗಶರ್ಮನೆನೀನು ಚಾಣಿಕ್ಯರಿದ್ದೆಡೆ| ಸಾಗಲುಕಾಡಿಗೆಯಾ|| ಬೇಗದಿತೊಳ ಕೊಂಡು ಪತ್ರವನವರಿಂಗೆ| ಬಾಗುತಕೊಡು ಎಂದನು ||೧||

(ವೇಗಶರ್ಮ) ಗುರುವಿನಪ್ಪಣೆಯಂತೆ ಕಾಡಿಗೆಚೂರ್ಣವ| ಕರದೊಳು ಸ್ವೀಕರಿಸಿ|| ಹರುಷದಿ ಉಪಯೋಗಿಸುತ್ತಲಿಏರಿದ| ತುರುಗನ ನಾಕ್ಷಣದೀ ||೨|| ದೂರದಹೆದ್ದಾರಿಯನುಬಿಟ್ಟುಕಾಡೊಳು| ಘೋರನೆ ನೆಡೆಸುತಾಗ|| ಸೇರಿದಪರ್ವತ ರಾಯನಸೇನೆಯ| ಆರು ಅರಿಯದಂದದಿ ||೩|| ಹುಡುಕಿಚಾಣಿಕ್ಯನ ಫಣೆಯಕಾಡಿಗೆಯನ್ನುವಡನೆ ಪ್ರಕ್ಷಾಳಿಸುತ|| ಮಡಿಲೊಳಗಿರಿಸಿಹ ಪತ್ರವತೆಗೆಯುತ್ತ| ಅಡಿಗೆವಂದಿಸು ತಿತ್ತನು ||೪||

(ಚಾಣಿಕ್ಯ) ಪಾದದಿಮಣಿದಿಹ ವೇಗಶರ್ಮನನೆತ್ತಿ| ಸಾದರದಾಶಿಷವಾ||ಗೈದುಪತ್ರವ ನೋದಿ ನೋಡುತ್ತಲವನೊಳು| ವೇದವೇತ್ತನುಕೇಳಿದ ||೫||

ರಾಗ ಬೇಗಡೆ ಅಷ್ಟತಾಳ

ಕುಶಲವೇಶರ್ಮರಿಗೆ ಹೇಳೈಯ್ಯಾ| ನೆಡಸೀರ್ಪಕಾರ್ಯದ| ಕುಶಲತೆಗೆ ಜೋಡಿಲ್ಲಪೇಳೈಯ್ಯಾ|| ವಿಷಯವೆಲ್ಲವ ಚಂದ್ರಗುಪ್ತನೊ| ಉಸುರಿಪರ್ವತರಾಯಗರುಹುತ್ತ

Scanned by CamScanner

ವೆಸೆದೆಸೆಯೊಳ್ಕಣ್ಣಿಟ್ಟು ಚಾರರ। ವಶದೊಳಿರುತಿಹ ಪತ್ರಪಡೆಯಲು ॥೧॥ ನಾನುಯತ್ನವ ಮಾಡುತಿಹೆ ನೀಗಾ। ಪರಕೀಯರಿದ್ದರೆ। ನೀನುಶೋಧಿಸಿ ತಿಳಿಯುವುದುಬೇಗಾ॥ ಸೇನೆಯನು ಶೋಧಿಸಲುನಮ್ಮಯ। ಸೇನೆಯಧಿಪತಿಗಳಿಗೆ ತಿಳುಹುವೆ। ತಾಣಥಾಣದೊಳರಸಿ ತರುವರು। ನ್ಯೂನವಿಲ್ಲದೆ ಗೂಢಚಾರರ ॥೨॥ ಚಂದ್ರಗುಪ್ತನು ಪರುವತೇಶ್ವರನೊ। ಇದ್ದೆಡೆಗೆದಾವಿಸು। ದೆಂದನಾಚಾಣಿಕ್ಯ ವಿಷಯವನೂ॥ ಇಂದುಶರ್ಮನು ಕ್ಷಪಣವೇಷದಿ। ಬಂದುಅಮಾತ್ಯಕಗೆಜ್ಯೋತಿಷ। ದಿಂದವಲಿಸುತ ನಮ್ಮಕಾರ್ಯಕೆ। ಮುಂದಿನನುಕೂಲತೆಯಗೈಸಿಹ ॥೩॥ ಗಂಗೆಸರಯೂ ನದಿಯ ಸಂಗಮದೀ। ಉತ್ತರತಟಾಕದಿ। ವಿಂಗಡದ ಜಪಶಾಲೆಯೊಳುಗೈದಿ॥ ಸಂಗರಹಿತರ ತೆರದಿನಟಿಸುತ। ತಂಗುತಾ ಮಾಸೋಪವಾಸಿಯು। ಇಂಗಿತವ ನರಿಯುತ್ತಮಾತ್ಯನ। ಕಂಗಳಿಗೆ ಮಣ್ಣೆರಚುತಿಹನ್ನೈ ॥೪॥

ಭಾಮಿನಿ

ಹೊರಗಡೆಗೆಕೋಲಾಹಲಧ್ವನಿ। ಬರಲುನೋಡೆನು ತುಚ್ಚರಿಸಲಾ। ಪರುವತೇಶನಚರರುಜೋಗಿಯ ವೇಷಧಾರಕನ॥ಕರವಪಿಡಿಯುತ ಸಿಂಗನಾಥದಿ ಇರುವಪತ್ರಗಳ್ಸಹಿತಲಾತನ। ಅರಸನೆದುರಿಗೆತಂದು ಲಿಖಿತವ ಕೊಡಲಿಕಾಕ್ಷಣದೀ ॥೧॥

ರಾಗ ಸೌರಾಷ್ಟ್ರ ತ್ರಿವುಡೆ

ನೋಡಿದನುಪರುವತನು ಲಿಖಿತವ। ಗೂಢಚಾರನಮುಖದಿರಾಕ್ಷಸ। ಮಾಡಿರುವ ಛದ್ಮವನುಯೋಚಿಸು ತೆಂದನಾಗ ॥೧॥ ಅರಸಿರೀಕ್ಷಣ ಸೇನೆಯಲ್ಲವ।ವರದಿರುವ ಚಾಣಿಕ್ಯರಾನುಡಿ। ಸ್ಥಿರವಿದಾಯಿತು ಅರಸುಮಕ್ಕಳಿಗರುಹುತಾಗ ॥೨॥ ಬೇರೆದೇಶದ ವಣಿಜರೆನಿಸಿಹ। ರ್‍ಯಾರೆನಿಮ್ಮಾಶ್ರಯದೊಳಿರ್ದರು। ದೂರದೇಶಕೆ ಕಳುಹಿಕಾವಲನಿಟ್ಟು ಬೇಗಾ ॥೩॥ ಪತ್ರವನುತಂದಿರುವ ಚರನನು। ಕತ್ತರಿಸಿನಾಸಿಕವ ಮೆರಸುತ। ಮತ್ತೆ ಬಂದಿಹರ್‍ಯಾರುಈತನ ಮುಖದಿತಿಳಿದು ॥೪॥ ಅವಂಗಿದೆ ಶಾಸನದಿಸೇನಾ। ನಿವಹದೊಳುಮೆರವಣಿಗೆ ಗೈಸುತ। ತವಕದಲಿಹೊರದೂಡಿ ಯೊದೆಯುತ ಲೆಂದನೃಪನೂ ॥೫॥ ಗೂಢಚಾರನ ಮೂಗಛೇದಿಸಿ। ಮಾಡಿದರುಮೆರವಣಿಗೆದಂಡಿಲಿ। ನೋಡಿಉಳಿದನ ರಲ್ಲಿಸಿಲ್ಲದೆ ಓಡಲಾಗ ॥೬॥

ರಾಗ ಕೇದಾರ ಗೌಳ ಅಷ್ಟತಾಳ

ಪರುವತರಾಯನಿ ಗೊರೆದನುಚಾಣಿಕ್ಯ। ಅರಸುಗಳಿಗು ನಿಮಗೂ॥ ಇರುವ ಸಖ್ಯವಹೋಗಲಾಡಿಸ ಲಾಮಾತ್ಯ।ಭರಿತಭೇದವಗೈದನೂ ॥೧॥ ಆದರೆಮಳಲ ಸೇತುವೆಯು ಪ್ರವಾಹಕ್ಕೆ। ಭೇದಿಸಿದಂತಾಯಿತು॥ ಈದೆಸೆಯೊಳುನಾವು ಭೇದಕ್ಕೆಭೇದದಿ। ಸಾಧಿಸಬೇಕೆಂದನು ॥೨॥ ಪರಮಪೂಜ್ಯರೆನಿಮ। ಗರಿತಂತೆ ಕಾರ್ಯವಾ। ಚರಿಸಲು

ತಡವ್ಯಾತಕೋ॥ ಅರುಹಿದ ರದರಂತೆ ತ್ವರೆಯಿಂದಗೈಯ್ಯಲು। ಪರುವತ ನಿಹೆನೆಂದನು ॥೩॥

ರಾಗ ಬೇಗಡೆ ಅಷ್ಟತಾಳ

ಮತ್ಸ್ಯ ಮೈಥಿಲಿ ಕಾಶಿದೇಶಗಳಾ। ಆಳ್ವಿಕೆಯ ಅರಸರು। ಮಿತ್ರರಾ ನವನಂದಬಳಗಗಳಾ॥ ಮತ್ತೆಕಾಶೀದೇಶದರಸಿಗೆ। ಪತ್ರವನುಬರೆಸುತ ನಿಯೋಗಿಯ। ಹಸ್ತಕೊಪ್ಪಿಸಿಕಳುಹೆಮುಂದೆವ್ಯ। ವಸ್ಥೆನೋಡುವೆ ನೆಂದದ್ವಿಜವರ ॥೧॥ ಪರುವತನಹೆಸರಿನಲಿ ಪತ್ರವನೂ। ಕಾಶೀಯದೇಶದ। ದೊರೆಗೆಕಳುಹಲುಬರೆಸಿ ಮೊಹರವನೂ॥ ಇರಿಸಿ ಕಮಲಾಪೀಡನೆಂಬುವ। ವರನಿಯೋಗಿಯ ವಶಕೆಕೊಡಿಸುತ। ಅರುಹಿದನು ಚಾಣಿಕ್ಯ ವಿವರವ। ಚರಿಸು ಆಪ್ತರಸಹಿತಲೆಂದನು ॥೨॥

(ನಿಯೋಗಿ) ಪೊರಟನಾಕ್ಷಣ ದೂತರಿಬ್ಬರನೂ। ತನ್ನೊಡನೆಕೂಡುತ। ತುರುಗವೇರುತ ಕಾಶಿರಾಜ್ಯವನೂ॥ ಪರಿಕಿಸುತ ದೂತರಿಗೆಅರುಹಿದ। ಇರುತಸೀವುಗಳಿಲ್ಲಿಪಾಟಲಿ। ಪುರದಮಾರ್ಗದಿ ಪೋಪಚರರನು। ಅರಿತುಎನಗೊರೆಯಿರಿ ವಿಶೇಷವ ॥೩॥ ಎನುತಲವರಿಗೆ ಪೇಳಿ ಗುಪಿತದಲೀ। ಕಮಲಾಪೀಡ। ಘನತೆಯಿಂಅರಮನೆಯ ಸನಿಹದಲೀ।ವಣಿಜನೊಬ್ಬನ ಗೃಹದಿತುರುಗಕೆ। ಉಣಿಸನೀಯಲು ಕೊಡುತಧನವನು। ಜನಪನಲ್ಲಿಗೆ ತೆರಳಿ ದ್ವಾರದ। ಜನರಕರೆಯುತ ಪೇಳ್ದವಿನಯದಿ ॥೪॥ ಪರುವತೇಶನಕಡೆ ನಿಯೋಗಿಗಳೂ ಬಂದೀರ್ಪರೆನ್ನುತ। ಲೊರೆಯುವುದು ನೀವೀಗ ಬೇಗದೊಳೂ॥ದೊರೆಯೊಳೆಮಗಿಹುದೈ ರಹಸ್ಯವು। ತ್ವರಿತದಿಂ ದವರನ್ನುಕಾಣಲು। ಅರುಹಿಅಪ್ಪಣೆಪಡೆದು ತಿಳುಹಿರಿ। ಚರರೆ ನೀವೆಂದೆನುತ ಪೇಳಲು ॥೫॥

ರಾಗ ಸೌರಾಷ್ಟ್ರ ತ್ರಿವುಡೆ

(ಕಾಶೀರಾಜ) ಇರಲುವಡ್ಡೋಲಗದಿ ನೃಪತಿಯು। ವರಸಚಿವ ಸಾಮಂತರಾಜರ। ಪರಿಪರಿಯ ಕುಶಲವನೆಬೆಸಗೊಳು। ತಿರಲಿಕಾಗ ॥೧॥ ದ್ವಾರಪಾಲಕ ಪೋಗಿಮಣಿಯುತ। ಸ್ವಾರಿದರ್ಶನ ಬಯಸಿಪರ್ವತ। ಧಾರುಣೀಪತಿಕಡೆ ನಿಯೋಗಿಯು। ದ್ವಾರದೆಡೆಗೆ ॥೨॥ ಬಂದುಅಪ್ಪಣೆ ಕೇಳಿನೀಬಾ। ರೆಂದುಪೇಳಲಿಕಾತಬಂದೆನು। ತಂದೆಯವರುತ್ತರವ। ಪೇಳುವೆ ನವನಿಗೆನಲು ॥೩॥ ಕಳುಹುಸಭೆಗೆನು ತಪ್ಪಣೆಯಕೊಡೆ। ತಿಳುಹಿದನ್ವಚಾರಕನಿಯೋಗಿಗೆ। ಬಳಿಕಪೋಗುತ ಮಣಿದುಪತ್ರವ ಕೊಡಲಿಕಾಗ ॥೪॥ ಅರಸುಪತ್ರವ ಕೊಂಡುವಾಚಿಸೆ। ಪರಮಪ್ರಿಯರಾಗಿರುವ ಶ್ರೀಮತು। ಅರಸುಗಳಿ ಗರಸಾದ ಕಾಶಿಯ। ದೊರೆಗಳಿಂಗೆ ॥೫॥ ಪರುವತೇಶನು ವಿನಯಪೂರ್ವಕ। ಅರುಹಿರುವ ತಮಗೀವಿನಂತಿಯು। ವರಕುಶಲ ಸಾಂಪ್ರತಿಯು ಉತ್ತರಬರೆಸಬೇಕು ॥೬॥ ಶತೃಗಳಭೀತಿಯಲಿನಮ್ಮಯ। ಹತ್ತಿರಕೆಬಂದೀರ್ಪಮೌರ್ಯನ। ಪುತ್ರನಾಗಿಹ ಚಂದ್ರಗುಪ್ತಗೆ ಅಭಯವಿತ್ತೆ ॥೭॥ ಆತನಿಗೆಪಿತರಾರ್ಜಿತತ್ವದ।ಭೂತಳವ ನವನಂದರಿಂದಲಿ।ಖ್ಯಾತಿಯಿಂ

Scanned by CamScanner

ಕೊಡಿಸುವರೆ ಸೈನ್ಯಸಮೇತರಾಗಿ ||೮|| ಬಂದಿಹೆವು ನಮಗೀಗ ನಿಮ್ಮಯ| ಮುಂದಿಮಾ ರ್ಬಲ ಸಹ ಸಹಾಯಕೆ| ಬಂದುದುಷ್ಟರತರಿದುಕೀರ್ತಿಯ ಹೊಂದಿರೆನುತಾ ||೯||

ವಾರ್ಧಿಕ

(ಕಾಶಿರಾಜ) ಮನದಿಯೋಚಿಸುತಾ ನಿಯೋಗಿಯಂ ಕರೆದೆಂದ| ಅಣಿಯಾಗಿಬರಲೆರಡು ದಿನಬೇರೆಕಾರ್ಯಂಗ| ಳೆನಗಿಹುದು ನೀನನಕ ಪಡಿಬಿಡಾರದೊಳಿರ್ದು ವಿಶ್ರಾಂತಿಯಂ ಪೊಂದುತಾ|| ದಿನವೆರಡುಕಳೆದುಬರೆ ಉಸುರ್ವೆ ನೆನ್ನುತಕಳುಹೆ| ಜನಪನರಮನೆಯಿಂದ ಹೊರಬರಲ್ಕಾದಿರುವ| ತನಗಾಪ್ತನೊಡನೆ ಸುಳಿವರಿತುಬಾ ಎನುತುಸುರಿ ತೆರಳಿದನು ವಣಿಜಗೃಹಕೆ ||೧||

ರಾಗ ಕೇದಾರಗೌಳ ಅಷ್ಟತಾಳ

(ಕಾಶಿರಾಜ) ಎನಗೀಗನಂದರು ಪ್ರಭುವಾಗಿಇರುವಾಗ| ಇನಿತುನಿಯೋಗಿಬಂದು|| ದನುತಿಳಿದರೆನಮ್ಮ ವಿಶ್ವಾಸಬಿಡುವರು| ಮನದಿ ಕೋಪವತಾಳ್ವರು ||೧|| ಈಗಲೀ ವಿಷಯವ ಮುಂಚಿತವಾಗಿಯೆ| ಕಾಗದವನುಬರೆಸೀ|| ಬೇಗದಿಕಳುಹುವೆ ನೆನುತಲಿ ಬರೆಸಿದ| ನಾಗನೃಪಾಲಕನೂ ||೨|| ಪರುವತನಿಂಬಂದ ಪತ್ರವಜೊತೆಯೊಳ|ಗಿರಿಸುತ್ತ ಚಾರಕನ|| ಕರೆದಿತ್ತುಅರುಹಿದ ತುರುಗವನೇರುತ್ತ| ತೆರಳಿಪಾಟಲಿಪುರಿಗೆ ||೩|| ನಂದರಿಗದನಿತ್ತು| ಉತ್ತರಸಹಿತಲೆ| ಬಂದುನಾಳಿಗೆಇಲ್ಲಿಗೇ|| ತಂದಪತ್ರವನೆನ್ನ ವಶಕೀಯಬೇಕೆಂದು| ಚಂದದಿನೃಪನೆಂದನು ||೪|| ವೇಗದೊಳೈದುವ ತುರುಗವನೇರುತ್ತ| ಸಾಗಿಪಾಟಲಿಪುರಿಗೇ|| ಬಾಗಿಲಕಾಯುವ ನಪ್ಪಣೆಪಡೆಯುತ್ತ| ಪೋಗಿಅಮಾತ್ಯಕಗೆ ||೫|| ವಂದಿಸಿಚಾರನು ತಂದಪತ್ರಗಳನ್ನು| ಮುಂದಿರಿಸಲು ನೋಡುತ್ತ|| ಇಂದಿದೇನ್ವೇಗದಿ| ಬಂದಂತೆತೋರ್ಪುದು| ಎಂದನಾಮಾತ್ಯಕನು ||೬|| ನಂದರಕರೆಯುತ್ತ ಕಾಶಿರಾಜನುನಮ|ಗಿಂದು ಈಪತ್ರಗಳ|| ಚಂದದಿಕಳಿಸಿಹ ನೇನೆಂದುವಾಚಿಸಿ| ಮುಂದೆನೋಡುವೆನೆನ್ನುತ ||೭|| ಶ್ರೀಮತು ನಂದಚಕ್ರೇಶರ ಚರಣದಿ| ನೇಮದಿಕಾಶೀಶನೂ|| ಪ್ರೇಮದಿನಮಿಸುತ ಮಾಳ್ಪವಿನಂತಿಯ| ಕ್ಷೇಮಕುಶಲಸಹಿತ ||೮|| ಅರಿಯದೆ ನಮ್ಮ ನಿಮ್ಮಯ ಮೈತ್ರಿಯವನೀಗ| ಪರುವತೇಶನುಪತ್ರವ|| ಬರೆಸಿನಿಯೋಗಿಯುಕಳಿಸಿರಲದರನ್ನು| ಇರಿಸಿಹೆ ಜೊತೆಯೊಳಗೇ ||೯|| ಚಿತ್ತಕ್ಕೆವೇದ್ಯವಾಗಿರಲಾತಸಿಗೆಕಾವ|ಲಿತ್ತುತಮ್ಮಲ್ಲಿಗೀಗ|| ಮತ್ತೆನಾಕಳುಹಲೊ ಪುರದಿಂದಲವನನ್ನು| ಕತ್ತಪಿಡಿದುದಬ್ಬಲೋ ||೧೦||

ರಾಗ ಕೇದಾರಗೌಳ ಝಂಪೆ

ಪತ್ರದರ್ಥವ ತಿಳಿಯುತಾ| ಅಮಾತ್ಯ| ಉತ್ತರವಬರೆಸಿಮತ್ತಾ|| ಭೃತ್ಯನಿಗೆ ಕೊಟ್ಟು ಇದನೂ| ಅರಸನಿಗೆ| ಗೊತ್ತಾಗಿ ಕೊಡುಎಂದನೂ ||೧|| ಪರುವತೇಶನಭೇದ

ವಾ| ನಮ್ಮಕಡೆ| ಅರಸುಗಳ ವಶಮಾಡುವಾ|| ಪರಿಯನ್ಯೋಚಿಸಿಮಾಡಿದಾ| ಕೃತ್ರಿಮವ| ಅರಿತುಕೊಳ್ಳಿರಿ ನೀವಿದಾ ||೨|| ಆರಾರಿ ಗೀತೆರದೊಳೂ| ಪತ್ರವನು| ತೂರಿದನೊ ಕೃತ್ರಿಮದೊಳೂ|| ಸೇರರೆಂದಿಗು ಅರಸರೂ| ಪರುವತವಿ| ವಿಚಾರಸೊನ್ನೆನು ಎಂಬರೂ ||೩|| ಅರಸರಿಂದಲೆ ಆತನಾ| ಹರಣವನು| ಪರಿಸಮಾಪ್ತಿಗೆ ಸಂಚನಾ|| ಬರೆದಿಹೆನುಕಾಶೀಶಗೇ| ತೆರಳುವನು| ಪರುವತೇಶ್ವರನ ಬಳಿಗೇ ||೪|| ಅರಿಗಳಿರುವರು ದುಷ್ಟರೂ| ಹೊಳಲೊಳಗೆ| ಇರುವರೈ ಪತಿವ್ರತೆಯರೂ|| ಪುರದರಕ್ಷಣೆ ಗೋಸುಗಾ| ಸೈನ್ಯವನು| ಇರಿಸದಿರೆಕೆಡುವುದೀಗಾ ||೫|| ಮಾನಭಂಗವ ಗೈಯ್ವರೂ| ಕೈರಾತ| ಸೇನೆಜನಬಹು ಕೆಡುಕರೂ|| ಮಾನವಂತೆಯರನೀಗಾ| ರಕ್ಷಿಸಲು| ಸೇನೆಇರಿಸುವೆನು ಬೇಗಾ ||೬||

ರಾಗ ಕೇದಾರಗೌಳ ಅಷ್ಟತಾಳ

ನಂದನುಚಾರರ ಕರೆಯುತ್ತಪೇಳಿದ| ಇಂದುನಮ್ಮಯಪುರದೀ|| ಮುಂದಿಗೆ ಅರಿವಾಗುವಂತೆ ಡಂಗುರಸಾರಿ| ಸಂದುಮೂಲೆಯಬಿಡದೇ ||೧|| ಇಲ್ಲಿಯವರಿಗೆ ನಮಿಂದಮಾನಿತರಾಗಿ| ಇಲ್ಲಸಲ್ಲದನೆಪದಿ|| ಎಲ್ಲರತೆರದಿಯುದ್ಧಕೆ ಪೋಗದಿಹರನ್ನು| ಗಲ್ಲಿಗೇರಿಸುವರೆಂದು ||೨|| ಗಂಗಸರಯುನದಿ ಸಂಗಮದುತ್ತರ| ವಿಂಗಡವಾಗಿರುವಾ|| ತಂಗಲುತಟ್ಟಾದಸ್ಥಳದಿ ರಾಜ್ಯೋಚಿತ| ಶೃಂಗಾರದಿಂಕೂಡಿದಾ ||೩|| ಉತ್ತಮವಾದ ಗುಡಾರಂಗಳ್ಹಾಕಿಸಿ| ಮತ್ತೆತೀಕ್ಷ್ಣಶೂಲವ|| ಸುತ್ತಲುಊರಿಸಿ ಹೊರಗಡೆಬಲ್ಲೆಯ| ಕತ್ತಿಭಟರನಿಲ್ಲಿಸೀ ||೪|| ಹೊರಗಡೆ ಖಡ್ಗಪಾಣಿಗಳಾದಶೂರರು| ತುರುಗರೂಡರುಇರಲೀ|| ನೆರೆಯೊಳ್ಪಿರಂಗಿಯ ಜೋಡಿಸಿಜಾವಿಗೆ| ಯರನುಸಂಧಾನಿಸುತಾ ||೫|| ಸಿದ್ಧರಾಗಿರಬೇಕು ನಾಡಿದುಬುಧವಾರ| ಯುದ್ಧಜಯಾರ್ಥನಾಗಿ||ಖುದ್ದಾಗಿಸಾವೆಬಂದಿಳಿಯುವೆನೆನುತಲ್ಲಿ| ಇದ್ದಅರಸರೊಡನೆ ||೬|| ರಾಜಪುತ್ರರೆನೀವು ನಮ್ಮಸಂಗಡದಲ್ಲಿ| ವಾಜಿಯನೇರಿಬಂದು|| ಮೂಜಗದೊಳುಪೊಸ ಸಂಗ್ರಾಮವೆನುವಂತೆ| ರಾಜಿಸಿವ್ಯೂಹದೊಳು ||೭|| ಎನುತಲಪ್ಪಣೆಇತ್ತು ಕಳುಹುತ್ತನಂದರು| ಮನದಿಅಂತಃಪುರದಾ|| ವನಿತೆಯರ್ಹ್ಯಾದಿಹ ರವರಸಂತೈಸಬೇ| ಕೆನುತಲಿ ಪೊರಟರಾಗ ||೮||

ರಾಗ ಯರಕಲ್ ಕಾಂಭೋದಿ ತ್ರಿವುಡೆ

ಬರೆವಿನಂದನುಗೃಹಕೇ| ಬಾಗಿಲೊಳಿರ್ಪ| ತರುಣಿಕಾಂತಿಯುಪದಕೆ|| ಎರಗಿಟಿಕ್ಕೆಯೊಳಪ್ಪಿ ಕಾಂತನೆ| ಬರಲುತಡವೇಕಾಯ್ತು ಇಂದಿನ| ಪರಿಯುಬೇರಾಗಿಹುದು ಚಿತ್ತಕೆ| ಭರಿತಕಾರ್ಯಾಚರಣೆ ತೊಡಕಿತೆ ||೧|| ಭಾಮೆಕೇಳೆಲೆನಮಗೇ| ಎದಗುವ ಕಾರ್ಯ| ನೇಮದಿಂಗೈಯ್ವಹಾಗೆ|| ಸ್ವಾಮಿಅಗ್ರಜನಾಜ್ಞೆಯಾಗಿರೆ| ಈಮಹಿಗೆ ಬಂದಿಹ ಅನಿಷ್ಟವ| ನಾಮಶೇಷವು ಉಳಿಯದಂದದಿ| ಕಾಮಿನಿಯೆ ನಾನೀಗಗೈಯ್ಯಲು ||೨|| ನಿನಗೆನೈವೇದ್ಯಕೆಂದೂ| ಮಾಡಿರುವೆನತುಳ| ತಿನಿಸುತಿಂಡಿಯ ನಾನಿಂದೂ||

ಗುಣಮಣಿಯೆ ಆರೋಗಣೆಯನೀ। ನಿನಿತುವೇಳೆಯೊ ಳೆಸಗದಿರ್ದಡೆ। ಮನವುನೊಯ್ದು
ದೆಬಿಡದುಯನ್ನಯ। ತನುವುಬೇಸರ ಗೊಳ್ಳದಿಹುದೇ ॥೩॥ ಚಂದ್ರಗುಪ್ತನಸಹಿತಾ।
ಶಾಹುರಿಪತಿಯು। ಬಂದುಸೇನೆಯ ನೆರಹುತಾ॥ ಇಂದೊನಾಳೆಯೊನಮ್ಮ ಪುರವನು।
ಹೊಂದಿಧಾಳಿಯ ನೆಡಸಿಸಂಪದ। ದಿಂದಕೂಡಿದರಾಜ್ಯಲಕ್ಷ್ಮಿಯ। ಮುಂದಲೆಯ ಪಿಡಿ
ದೊಯ್ವರೆಂಬರು ॥೪॥ ಭಾವವ್ಯೆದುನರೀರ್ಪರೂ। ಅರಿಗಳುಬಂದ।ತಾರ್ಣವೆಬಿಡಿಸಿ ಬಿಡು
ವರೂ॥ ನೀವುವ್ಯಾಜ್ಯಾಂತರದೊಳಿಲ್ಲಿಯೆ।ಸೇವೆಗೈಯ್ಯಲು ಜನಕಜನನಿಯ। ಕಾವಲಿಗೆ
ಇಹೆನೆಂದು ಪೇಳಿರಿ। ಕೋವಿದರೆನಿಮ್ಮಗಲಲಾರೆನು ॥೫॥ ಜನಪನಪ್ಪಣೆಯಂದದೀ।
ಆಚರಿಸದೆ। ಮನೆಯೊಳಿರಲುಶೀಘ್ರದೀ॥ ದಿನಪಸುತನಾಲಯಕೆ ಕಳುಹಲು। ಧನಿಯು
ಅಪ್ಪಣೆಕೊಡುವ ಶೂಲಕೆ। ಅಣೆಯುನಾನಿರಬೇಕು ಹೇಡಿಯ। ಗುಣವನವಲಂಬಿಸೆನು
ಎಂದಿಗು ॥೬॥ ಕುವರರಿಲ್ಲದಗೃಹವೂ। ಆಕಾಶದಿ। ರವಿಇಲ್ಲದಂತಹುದೂ॥ ಭವರಕ್ಕೆ
ದುವು ದಾದರೆನ್ನೊಳು। ತವಕೃಪೆಯು ಪರಿಪೂರ್ಣವಿರೆ ಈ। ದಿವಸಸಂತಾನವನೆ ಪಡೆ
ಯುತ। ರವಿಯುದಯದೊಳು ಪೋಪುದೆಂದಳು ॥೭॥

ಭಾಮಿನಿ

ಅರಿಮರುಳುನೀನೆಂಬೆ ಹಸಿವೆಯ। ಪರಿಪೆಇಲ್ಲದೆ ಆಗುಹೋಗದ। ಕಿರುಕುಳದಿ
ಕಾಲವನೆಕಳೆಯದೆ ಗೈದತಿನಿಸುಗಳ॥ ಹರುಷದಿಂದೆನಗಿತ್ತು ದೇವರ। ಚರಣವನುನೀ
ಭಕ್ತಿಭಾವದಿ। ಸ್ಮರಸುಭಕ್ತರಬಂಧು ಭೀಷ್ಟವ ಸಲಿಪನವನೆಂದಾ ॥೧॥

ರಾಗ ಝಂಜೂಟಿ ಅಷ್ಟತಾಳ

ನಂದನ ರಾಣಿಕಲ್ಯಾಣಿ। ದಿವ್ಯ। ಸುಂದರ ಕೋಕಿಲವಾಣಿ॥ ಗಂಧದತಟ್ಟೆಯ
ಪಿಡಿದುಬಾಗಿಲೊಳಿರೆ।ಬಂದಪತಿ ಗಭಿವಂದಿಸುತ್ತಲಿ।ತಂದುಪೀಠವನಿತ್ತು ಪೂಸುತ॥೧॥
ಜೀವಿತೇಶನೆ ರಾಮಾಯಣದಲ್ಲಿ। ಭಕ್ತಿ। ಭಾವದೊಳಿಹತಮ್ಮನಲ್ಲಿ॥ ಆವದೋಷಗಳಿಲ್ಲ
ದೀರ್ದರುಹೊರಡಿಸಿ। ಸಾವನಪ್ಪಿದ ವಾಲಿಕಥೆಯನು। ನೀವುತಿಳಿದಿರಬಹುದುಪಿಂದೆಯೆ
॥೨॥ ಯಾತಕಾಕಥೆಪೇಳೆರಮಣೀ। ನಿನ್ನ। ಮಾತುಬೇರಾಗಿದೆಸುಗುಣೀ॥ ಸೋತಿದೆ
ದೇಹವು ರಾಜಕಾರಣದಿಂದ। ಪ್ರೀತಿಯಿಂದುಣಬಡಿಸುನಂತರ। ಭೂತಳದ ಕಥೆಪೇಳ್ವೆ
ನೆಂದನು ॥೩॥ ಇನಯನಕರೆದುಭೋಜನದೀ। ತೃಪ್ತಿ। ಯನುಗೈಯ್ಯು ತುಭಯರು
ಮುದದೀ॥ ಕನಕದತಟ್ಟೆಯೊ ಳ್ಕರ್ಪೂರವೀಳ್ಯವ। ನನುಮತದೊಳೀಯುತ್ತ ರಮಣನೆ॥
ಎನಗೆಪೇಳಿರಿಕಥೆಯನೆಂದಳು ॥೪॥

ರಾಗ ಕೇದಾರಗೌಳ ಅಷ್ಟತಾಳ

ಅರಸಿವಕ್ಕಣಿಸಿದ ಪರಿಯುನಾ ನರಿತೆನು। ಇರುತೀಹಶತ್ರುಶೇಷ॥ ಪರುವತವಲ್ಲವು
ತೃಣಕೆಸಮಾನವು। ಪರಿಹರಿಸದೆಬಿಡೆವು ॥೧॥ ನಿರಪರಾಧಿಗಳಾದ ನಿಮ್ಮಅಗ್ರಜರನ್ನು

ತರಳರಸಹಿತನೀವು॥ ಕರುಣವನುಳಿದು ಸಂಹರಿಸಿರೆ ಉಳಿದಿಹ। ತರುಣನೋರ್ವನು
ಮುಂದಿನ ॥೨॥ ವರಧರ್ಮಸಂತಾನ ವೃದ್ಧಿಗೋಸ್ಕರವಾಗಿ। ಇರುತೀಹ ಚಂದ್ರಗುಪ್ತ॥
ಭರಿತತಪಸ್ವಿಯು ಚಾಣಕ್ಯರೆಂಬರ। ಶರಣುಹೊಕ್ಕಿರಲಿಕಾತ ॥೩॥ ಮೊದಲಿಗೆನಿಮ್ಮ
ಸಂಹರಿಸಲು ಅಪವಾದ। ಒದಗುವು ದನುತಿಳಿದು॥ ಬುಧರನ್ನಛತ್ರದಿ ನಿಮ್ಮಆಸನದಲ್ಲಿ।
ವಿಧಿತಪ್ಪಿ ಕುಳಿತಿರಲು ॥೪॥ ಬುಧನಕುಮಂತ್ರವ ನರಿಯುದೆಅತನ। ಅಧಿಕತೇಜವನೋ
ಡದೇ॥ ವಿದಿಸಿದಅಪಮಾನ ದಿಂದಕುಪಿತನಾಗು।ತೊದಗಿದ ರೋಷದೊಳು ॥೫॥ ನಂದರ
ನಿರ್ಮೂಲ ವೆಸಗುವೆನೆನ್ನುತ। ಅಂದುಪ್ರತಿಜ್ಞೆಯನೂ॥ ಮುಂದಿಹದ್ವಿಜರ ಸಮ್ಮುಖ
ದಿಗೈಯ್ಯುತಲಾತ। ಚಂದ್ರಗುಪ್ತನಸೇರಲು ॥೬॥

ರಾಗ ಬೇಗಡೆ ಅಷ್ಟತಾಳ

ಜನಧನಗ ಳವಗಿಲ್ಲವಂಟಿಗನೂ। ಆಚಂದ್ರಗುಪ್ತನು।ಬಣಗುರಾಜರನೆರಹಿ ಬಂದಿ
ಹನೂ॥ ತೃಣಕೆಸಮನಾಗಿರುವ ಆಧಮರ। ಗಣನೆಗೇನಾವ್ ತಾರೆವೆಂದಿಗು। ಉಣಿಸು
ವೆವು ಶಾಕಿನಿಯಬಳಗಕೆ। ಮನದಿಚಿಂತಿಸಬೇಡ ರಮಣಿಯೆ ॥೧॥ ನಿಜವನುಸುರುವೆ
ರಮಣಲಾಲಿಪುದೂ। ನಿರ್ವ್ಯಾಜ್ಯವಾಗಿಯೆ। ಸ್ವಜನಸಂಹೃತಿದೋಷ ಬಂದಿಹುದೂ॥
ಸುಜನರಾಗಿಹವರ್ಹಾರ್ಯರಾವಧೆ। ಅಜಗರನವಿಷದಂತವಾಗಿದೆ। ರುಜುವುನಂದರಿ ಗಿಲ್ಲವೆಂ
ಬರು। ಪ್ರಜೆಗಳೀಗಲ್ಲಲ್ಲಿಪುರದೊಳು ॥೨॥ ಹೊಂದಿರುವ ಅಪಕಾರಕಿಂದಿನಲೀ। ಪ್ರತ್ಯಪ
ಕಾರ। ಚಂದ್ರಗುಪ್ತನುಮಾಡೆ ಧರ್ಮದಲೀ॥ ಕುಂದುಬಾರದು ಧರ್ಮವಿದ್ದೆಡೆ। ಬಂದ
ಪಳುಜಯಲಕ್ಷ್ಮಿ ದ್ವಿಜವರ। ನೆಂದಿಗೂಬಿಡನವನು ಶಪತದಿ। ನಂದವಂಶವ ನಾಶಮಾ
ಡದೆ ॥೩॥ ಅಳಿವುಉಳಿವುಗ ಳಿಲ್ಲನಮ್ಮೊಳಗೇ। ವಿಧಿಬರೆದ ಬರಹವ। ಅಳಿಸುವರೆ ದ್ವಿಜನ
ಲ್ಲಶಂಕರಗೇ॥ ಅಳವೆಶಾಸ್ವಿತವಲ್ಲ ವೀಧರೆ। ವಲಿವಳೋಕುಲವಳಿಪಳೋನಾವ್। ಛಲವ
ನವಲಂಬಿಗಳು ಮುಂದಿನ। ಫಲವಕಂಡವರಾರು ರಮಣಿಯೆ ॥೪॥ ಬೇಡಛಲನಿಮ್ಮೊ
ಳಗೆ ದಯುವಿಟ್ಟೂ। ಅಮಾತ್ಯರಿಂದಲಿ। ಮಾಡಿಸುತಸಂಧಿಯನೆ ಕೃಪೆಇಟ್ಟೂ॥ ಪ್ರೌಢ
ಯಾಗಿಹ ಚಂದ್ರಗುಪ್ತಗೆ। ನೀಡಿಸೇನೆಯ ನಾಯಕತ್ವವ। ಮಾಡಿದಂಡಪ್ರಣಾಮ
ವಿಬುಧಗೆ। ಬೇಡಿಕ್ಷಮೆಯನು। ಧೈನ್ಯಭಾವದಿ ॥೫॥

ರಾಗ ಕೇದಾರಗೌಳ ಅಷ್ಟತಾಳ

ನುಂದಗನುನೆಕೇಳು ದೇಶದಅರಸರ। ಒಂದುಗೂಡಿಸಿಸೇನೆಯ॥ ತಂದುನಮ್ಮಯ
ಗಡಿ ದುರ್ಗವಪಿಡಿದಿರೆ। ಹಿಂದೆಪೋಪರೆ ಸುಮ್ಮನೆ ॥೧॥ ಇನಯಕೇಳವರ ಸೇನೆಯ
ವೆಚ್ಚಪೆಲ್ಲವ। ಮನಕೊಪ್ಪುವಂತೆಕೊಟ್ಟು॥ ಸನುಮತದಿಂದ ಮನ್ನಿಸು ತುಡುಗರೆಇತ್ತು
ಘನತೆಯಿಂಕಳುಹೆಂದಳು ॥೨॥ ಸರಸಿಜಾಂಬಕಿಕೇಳು ಧುರದೊಳುಅರಿಗಳು।ತರಹರಿಸದೆ
ಸಂಧಿಗೇ॥ ಬರುವರೆನಾಳಿಗೆ। ತೆರಳಿಯುದ್ಧದಿನಾವು। ಪರಿಹರಿಸುವೆವೆಂದನು ॥೩॥ ನವ
ನಂದ ರರಸಿಯು ರರಸರಸಂಗಡ। ವಿವಿಧಹಿತೋಕ್ತಗಳಾ॥ ಹವಣಿಸಿಪೇಳಲು ಕೇಳದೆ ವನಿ

Scanned by CamScanner

ತೆಯ। ಭರ್ಜನದಿಸಂತೈಸಲು ॥೪॥ ಮರುದಿನಕ್ಷಪಣಕ ನೊಡನೆಅಮಾತ್ಯಕ। ಅರಸರು ಪೊರಡಲಿಕೆ॥ ಗುರುವುತೊಲಾಲಗ್ನ। ನಿಶ್ಚೈಸಿಕಳುಹಿರೆ। ಸರಿಯೇನೀವ್ ನೋಡಿರೆಂದ ॥೫॥ ನೋಡಿಆಕಾಶವ ಬೆರಳನ್ನುಮಡಿಚುತ್ತ। ಮಾಡುತ ಲೆಖ್ಖವನೂ॥ ಕೂಡಿಬಹುದು ಲಗ್ನ ವೃಚ್ಛಿಕದೊಳುಶುಭ। ರೂಢಿಪಾಲರುಪೋಗಲು ॥೬॥

ವಾರ್ಧಿಕ

ಲಘ್ನಾಧಿಪತಿಯು ಶತೃಸ್ಥಾನಮಂನೋಳ್ಪ। ವಿಘ್ನಮಿಲ್ಲದೆಅರಿಗಳೆಲ್ಲ ಕ್ಷಯ ವಾಗುವರು। ಶೀಘ್ರದೊಳು ವಿಜಯಯಾತ್ರೆಗೆ ಪೊರಡ್ವಪೂರ್ವ ಮಹದಾನಂಗಳಂಗೈಸುತಾ॥ ಅಗ್ರಸೇನೆಯಕೂಡಿ ಪೋಗೆಶುಭಫಲವೆಂದು। ನಿರ್ಗಮಿಸೆಕ್ಷಪಣ ನಾಮಾತ್ಯನೆಂದರಕರೆದ॥ ನರ್ಘ್ಯವಸ್ತ್ರಾಭರಣ ಧೇನುಗಳವಿಬುಧರಿಗೆ ಕೊಡಿಸಿದಂ ವಿದಿ ಪೂರ್ವಕ ॥೧॥

ರಾಗ ಕೇದಾರಗೌಳ ಝಂಪೆ

ತಂದೆತಾಯಿಗಳಅಡಿಗೇ। ವಂದಿಸಲು। ಬಂದರವರೀರ್ಪಎಡೆಗೇ॥ ಚಂದದಿಂಮಣಿಯುತಿರಲೂ। ಸುನಂದೆಯಾ। ಕಂದರನುಪೊರಸುತಿರಲೂ ॥೧॥ ವಸುಗೆಎನ್ನುತಚಾರನೂ। ಬಾಗಿಲೊಳು। ಉಸುರೆ ಕೇಳದನಂದನೂ॥ ದೆಸೆಇದೇನೆನುತಲಾಗ। ಹೊರಬರಲು ಬೆಸಸಿದನುಭಟನುಬೇಗಾ ॥೨॥ ಗಿಂಡಿರಾತರಸೇನೆಂಚೂ। ಶಕಸೈನ್ಯ। ಸಂಗಡದ ಧುರದ ಪರಿಯೂ॥ ಮಂಗಳವು ನಮಗಾಯಿತೂ। ಅರಿಗಳಿಗೆ। ಭಂಗವೇ ಸಂಘಟಿಸಿತೂ ॥೩॥ ದಾರಿಯೊಳು ಸಿಡಿಮದ್ದನೂ। ನೆಲದೊಳಗೆ। ಸೇರಿಸಿರೆ ಅರಿಗಳದನೂ॥ ತೋರದೇಬರಲಿಕಾಗ। ಸ್ಫೋಟನದಿ। ಹಾರಿತಾನೆಲವುಬೇಗಾ ॥೪॥ ಹತ್ತುಸಾವಿರಸೇನೆಗೇ। ಜವನಗರ। ಮತ್ತಾಯಿತೈಯ್ಯಕಡೆಗೇ॥ ಬತ್ತಿಬಾಯಾರ್ದಜನರೂ। ವಿಷದುದುಕ। ನೆತ್ತಿ ಕುಡಿಯುತ ಸತ್ತರೂ ॥೫॥ ಎನೆಕೇಳಿ ಹರುಷಗೊಳುತಾ। ಜನಕನಿಗೆ। ವಿನಮಿಸುತಪರಿಕೆಗೊಳುತಾ॥ ಅಣಿಯಾದಸೇನೆಸಹಿತ। ಧುರಕಾಗಿ। ಘನವೇಗದಿಂಪೊರಡುತಾ ॥೬॥

ವಾರ್ಧಿಕ

ಅರಸುಮಕ್ಕಳುರಥವ ನಡರುತಿರೆಮಾರ್ಜಾಲ। ಹರಿದುದೆಡಭಾಗಕ್ಕೆ ವಾಮನೇತ್ರಗಳದುರೆ। ಕರಿಯುಘೀಳಿಡೆ ಹಂಗಹದ್ದುಗಳು ತೀರಾಗ್ರದೊಳ್ ಕುಳಿತುದಂನೋಡಿ ಜನರೂ॥ ಒರೆಯಲಂಜುತಮನದಿ ದುಃಶಕುನವಿದರಿಂದ। ಧುರದೊಳಪಜಯವೆನುತ ತನ್ಮೊಳಗೆಮಾತಾಡೆ। ಬರಲುಗಂಗಾಸರಯು ತೀರದೋಳ್ಕಟ್ಟಿರುವ ಪಾಳಯಕೆಸೇನೆ ಸಹಿತಾ ॥೧॥

ರಾಗ ಸಾಂಗತ್ಯ ರೂಪಕ ತಾಳ

ದೂರದಿತೋರುವ ಜಪಶಾಲೆಯನುನೋಡಿ। ಚಾರಕನೊಡನೆವಿನಂದ॥ ಆರಿವರೆಂದುಪ್ರಶ್ನಿಸಲಾಗ ಧನಿಗೆವಿ। ಚಾರವ ಪೇಳ್ವೆತಾನೆಂದ ॥೧॥ ಶತೃಪಲಾಯನ ಜಪಹೋಮಶಾಲೆಯಾ। ಮಾತ್ಯರಪ್ಪಣೆ ಯಂತೆರಚಿಸೀ॥ ನಿತ್ಯವುನೆಡೆಸುವ ವಿಬುದರುತವಗಿಲ್ಲಿ। ಸ್ವಸ್ತಿವಾಚಿಸಲು ನಿಂದಿಹರೂ ॥೨॥ ಆಗಲಾನಂದನು ಮಂತ್ರಕೋವಿದರೇಸೀ। ವೀಗಗೈಯ್ಯುವ ತಂತ್ರದಿಂದ॥ ಸಾಗಲುಅರಿಗಳು ಶಾಶ್ವಿತ ಸಿಧಿಯನ್ನು। ಬೇಗಾದಿನಿಮಗೀವೆನೆಂದಾ ॥೩॥ ಕರಕಮಂಡಲದಂಡ ರುದ್ರಾಕ್ಷಿಕೊರಳಲ್ಲಿ। ಬೆರಳ ಪವಿತ್ರಪಂಚಕವೂ॥ ಧರಿಸಿದ ಭಸ್ಮತ್ರಿಪುಂಡ್ರವು ಪವಳದ। ಸರಜಪ ಮಣಿಬಂದವೆಸವ ॥೪॥ ಶಿರಪಾದಪರಿಯಂತ ಕೃತಕದಕೆಂಜೆಡೆ। ಮಿರುಗುವಂಬರ ಕೃಷ್ಣಾಂಜಿನದೀ॥ವರಶಿಷ್ಯರೆಸಗುವ ಗೋಮಯೋದಕದಿಂದ। ಪರಿಶುದ್ಧ ನೆಲದಿಬರುತಿರುವಾ ॥೫॥ ಮುನಿವೇಷಧಾರಕ ಮಾಸೋಪವಾಸಿಯ। ಜನಪನಂದರು ಕಾಣುತಾಗ॥ ವಿನಯದಿಂಸಾಷ್ಟಾಂಗ ದಿಂದವಂದನೆಗೈದು। ಮನದೊಳ್ಯಾರೆಂದು ತರ್ಕಿಸಲು ॥೬॥

ರಾಗ ಬೇಗಡೆ ಅಷ್ಟತಾಳ

(ಶಿಷ್ಯರು) ಭೂಮಿಪಾಲಕರುಗಳೆ ಲಾಲಿಪುದೂ॥ ಪ್ರಯಾಗಕ್ಷೇತ್ರಕೆ। ಆಮಹಾಮುನಿ ದತ್ತರ್ಬಂದಿಹುದೂ॥ ನೇಮದಿಂ ಗಂಗೋತ್ರಿಯೊಳಗಿಹ। ಸ್ವಾಮಿಯರಿತೈತಂದು ದರ್ಶನ। ಕಾಮಿತವಪಡೆಯುತ್ತಲಾಶ್ರಮ। ಕ್ಷೇಮಹಿಯ ಮಾರ್ಗದಲಿಧಾವಿಸೆ ॥೧॥ ಧರ್ಮಯುತರಾಗಿರುವ ನಂದರಿಗೇ। ಅರಿಪಕ್ಷಪಾತಿಯು। ದುರ್ಮತಿಯು ಪರುವತನು ತನ್ನೊಳಗೇ। ಕರ್ಮಹೀನ ಕಿರಾತಮ್ಲೇಂಚ್ಛರ। ವಲ್ಮೆಯಂಪಡೆಯುತ್ತಲಿಲ್ಲಿಗೆ। ದುರ್ನಿಮಿತ್ತದೊಳೊದಗೆ ಭಯದಲಿ। ಬ್ರಾಹ್ಮಣರುಇವರನ್ನು ಪ್ರಾರ್ಥಿಸೆ ॥೨॥ ನಿರುತಧರ್ಮದೊಳಿರುವ ತಮಗೀಗ। ಭಯಶಾಂತಿಗಾಗಿಯೆ। ವಿರಚಿಸುವ ಜಪಹೋಮದೊಳುಬೇಗಾ॥ ದುರುಳರಾಗಿಹ ಶತೃನಾಶಕ। ವರಮಹಾಮಂತ್ರಜ್ಞರಾರ್ತ್ವಿಜ। ಕೊರೆಯೆಸ್ವಾರ್ಥಗಳಿಲ್ಲವೆನ್ನುತ। ಕರುಣನಿಧಿ ಮಾಸೋಪವಾಸಿಯು ॥೩॥ ಬಂದುಆರ್ತ್ವಿಜ್ಯವನೆವಹಿಸುತಲೀ। ಜಪಹೋಮತರ್ಪಣ। ದಿಂದಶೂಲಿನಿ ಯೊಲಿಸೆಭಕ್ತಿಯಲೀ॥ ಮುಂದೆರಾಜ್ಯಾಭ್ಯುದಯ ಕಾಗಿಯು। ಬಂದಶತೃವ ನಾಶಕಾಗಿಯು। ಇಂದನುಷ್ಠಾನದೊಳು ತೊಡಗಿರೆ। ಬಂದಿಹರು ದರ್ಶನವ ನೀಯಲು ॥೪॥

ರಾಗ ಕೇದಾರಗೌಳ ಅಷ್ಟತಾಳ

ತಂದೆಯು ಪುತ್ರಕಾಮಿತನಾಗಿ ಮುನಿಗಳು। ಬಂದಕಾಲದಿಪೂಜಿಸೆ॥ ಅಂದವರುಹಿದ। ವಚನವೃಷ್ಟಿರವಾಯಿ। ತೆಂದುಪೇಳಿದ ನಂದನು ॥೧॥ ಈಗಳೀಮುನಿಗಳು ಆರ್ತ್ವಿಜ್ಯವರ್ಣನೆ। ಕೈಗೊಂಡ ಬಳಿಕೆಮಗೇ॥ ಬೇಗನೆಶತೃವು ನಷ್ಟಪ್ರಾಯರುನಿಜ। ವಾಗಿ

Scanned by CamScanner

ಯಾಗುವುದಾದರೂ ॥೨॥ ನಷ್ಟದದಿನವ್ಯಾವು ದೆಂದುಕೇಳಲುನಮು| ಗಿಷ್ಟವಾಗಿರುವು ದೀಗ॥ ಶ್ರೇಷ್ಠಮುನಿಗಳಿಗೆ ಮೌನವೊಪೇಳಲು| ಗುಟ್ಟೇನಾದರುಇಹುದೋ ॥೩॥ ಎನೆ ಕೇಳಿ ಮಾಸೋಪವಾಸಿಯು ಪೇಳ್ದನು| ತನಯುರೆ ಪೇಳುವೆನು॥ ಜನರೊಳುವಾಕ್ಕಲಹ ಶಾಂತ್ಯರ್ಥಮೌನವು| ಜನಪರೊಡನೆಮೌನವೆ ॥೪॥ ಶತ್ರುನಾಶಾರ್ಥದಿ| ಶೂಲಿಸಿಜಪ ಹೋಮು| ಕಾರ್ತ್ತಿಕವ್ರತ್ಯವಹಿಸಿನಾವು॥ ನಿತ್ಯದಿಗೈಯ್ಯುವೆ| ಶುಕ್ರವಾರಕೆಅಂತ್ಯ| ಧಾತ್ರಿ ಪಾಲರಕೇಳಿರಿ ॥೫॥ ಹೋಮಪೂರ್ಣಾಹುತಿ ನಂತರಶತ್ರುವು| ನಾಮಶೇಷಗಳಿಲ್ಲದೆ॥ ಭೂಮಿಯಭೋಗದಿ ತ್ಯಜಿಪನಿದರ್ಶನ| ನೇಮದೊಳಿಹುದೆಂದೆನು ॥೬॥ ಆಗಆಗುವನಿ ದರ್ಶನ ವೇನುಪೇಳಿರಿ| ಹೇಗೆತಿಳಿಯುವ ದದನೂ॥ ಯೋಗಿವರ್ಯರೆ ಪೇಳಬೇಕೆಂದು ನಂದನು| ಬಾಗಿಶಿರವನಿಂದನು ॥೭॥

ವಾರ್ಧಿಕ

(ಮಾಸೋಪವಾಸಿ) ಅರಸುಗಳಿಕೇಳಿ ಹೋಮಾಂತ್ಯದೊಳ್ ಅರ್ತ್ವಿಜಂ| ವರಪ್ರಧಾನ ದಹೋಮ ದ್ರವ್ಯಗಳಯುಕ್ತವಾ| ಗಿರುವಸೃಕ್ಸ್ರುವೆಗಳಂ|ಪಿಡಿದು ಆದೇವಿಯಂ|ಭಕ್ತಿ ಭಾವದಿಪ್ರಾರ್ಥಿಸೇ॥ ಪರಿಶುದ್ಧವಾದ ಪೂರ್ಣಾಹುತಿಯ ಸಮಯದೊಳಿ|ವರಸುಗಂಧದ ಘೌಳಿಯುಲಿದಗ್ನಿಕೊಂಡದಿಂದೇವಿ| ಕರವುಆವಿರ್ಭವಿಸಿ ಆಹುತಿಯ ಪಡೆವುದೆಂ ದೊರೆ ದನಾ ಯೋಗೀಶನು ॥೧॥

ರಾಗ ಕೇದಾರಗೌಳ ಅಷ್ಟತಾಳ

(ನಂದ) ಮುನಿಪರೆ ದೇವಿಯ ಹಸ್ತದರ್ಶನಕಾಗಿ| ಅನುಜರುಸಹಿತಿಲ್ಲಿಗೇ॥ ಘನಭಕ್ತಿ ಭಾವದಿ ಬರಬಹುದಾದರೆ| ಸನುಮತ ವೀಯುವಿರೇ ॥೧॥
(ಮುನಿ) ನಿಮಗೆಕುತೂಹಲ ವಿರೆದೇವಿದರ್ಶನ| ವಮಿತಪುಣ್ಯಪ್ರದವೂ॥ ಸಮಯಕ್ಕೆಸಂಯಾಗಿ ಮಡಿಯೊಳುಬಹುದಲ್ಲಿ|ಕ್ರಮದೀತೋರಿಸುವೆನೆಂದ ॥೨॥ ಅಂತುಪೂರ್ಣಾಹುತಿ ಸಮಯವಶಿಷ್ಯರು| ಅರುಹಲಿ ಬರುವೆವೆಂದು॥ ಹಿರಿಯನಂದನುಪೇಳುತ್ತಿರೆ ಮುನಿವರ್ಯನು ಅರುಹಿದ ನವರೊಡನೇ ॥೩॥ ದೇವಿಯಹಸ್ತ ವದೃಶ್ಯವಾಗಲುಆಗ| ಜೀವದಿ ತಳಮಳಿಸೀ॥ ಸಾವರುಶತ್ರುವು ಒಂದುಯಾಮದೊಳೆಂದು| ಕೋವಿದ ಪೇಳಿದನು ॥೪॥ ಹರುಷದಿನಂದರು ಮುನಿಗಳ್ಗೆವಂದಿಸಿ| ತೆರಳೆಗುಡಾರಕಾಗ॥ ಪಂಗಳವಿವರದಿ ಚಾಣಕ್ಯಗರುಹಲು| ಕರೆದುಪುಲೋಮನೊಳು ॥೫॥

ವಾರ್ಧಿಕ

ತಿಳುಹಿದನು ಮಾಸೋಪವಾಸಿ ಶಿಷ್ಯನೆ ನಿನಗೆ| ತಿಳಿಯದಿಹ ವಿಷಯವೊಂದಿಲ್ಲ ಕಾಡಿಗೆಧರಿಸಿ|ಬಲುವೇಗದಿಂಪೋಗಿ ಚಾಣಕ್ಯರಡಿಗೆರಗಿ ತಿಳುಹು ನಂದರು ಬಂದುದಾ॥

ಛಲವತೀರಿಸೆ ಭಾರ್ಗವಾಸರದ ನಿಸಿಂಯೊಳಗೆ| ವಳಿತಾದಸಮಯವೆಂದರುಹು ಪೂರ್ಣಾಹುತಿಗೆ| ತಿಳುಹಿಕರೆಸುವೆನವರ ನರ್ಧರಾತ್ರಿಯೊಳೆಂದು ಪೇಳಿರುವೆನಾನೆನ್ನುತಾ ॥೧॥

ರಾಗ ಕೇದಾರಗೌಳ ಅಷ್ಟತಾಳ

ಇತ್ತಕಾಶೀಶನ ಭೃತ್ಯನಾಮಾತ್ಯಕ| ನಿತ್ತಪತ್ರವನೆಕೊಂಡು॥ ಪತ್ತನ ಕಭಿಮುಖವಾಗಿ ಬರಲುಕಂಡು| ಪತ್ತೆತಿಳಿವಚಾರನು ॥೧॥ ಬಂದರುಹಿದನು ನಿಯೋಗಿಯ ಸಂಗಡ| ಹಿಂದಿನದಿನಪೋಗುತಾ॥ ಬಂದನುಪಾಟಲಿ ಪುರದಮಾರ್ಗದೊಳೋರ್ವ| ನೆಂದುದಯೋಚಿಸುತಾ ॥೨॥ ತಿಳಿಯಿತುಕಾಶೀಶ ನಂದರಸಲಹೆಯು| ಘಳಿಲನೆಪಡೆಯಲಿಕೆ॥ ಕಳುಹಿದಚಾರನುತ್ತರಸಹಿತೀದಿನ|ಬಲುಬೇಗಬಂದಿಹನು ॥೩॥ ಅರಸನೊಡ್ಡೋಲಗದೊಳಗಿರೆಚಾರನು| ಚರಣಕ್ಕೆವಂದಿಸುತಾ॥ ಕಂಕಿತ್ತಪತ್ರವ| ಕರಣಿಕರಿಗೆಕೊಡೆ| ನಿರುಕಿಸಿವಾಚಿಸಲು ॥೪॥ ಸ್ವಸ್ತಿಶ್ರೀಮತುವೈರಿ ನಘಕೆವಜ್ರೋಪಮು| ಪೃಥ್ವಿಪಕಾಶೀಶಗೇ| ಧಾತ್ರಿಯೊಳ್ಪಾಟಲಿ ಪುರದಿಂದ ನಂದರು| ಇತ್ತಿಹಆಶಿಷವೂ ॥೫॥ ಚರರಮುಖದಿ ನೀವುಕಳುಹಿದಪತ್ರಗ| ಳೆರಡರಸಂಕೇತವೂ॥ ಅರಿತಿಹೆವೀಗ ನಿಯೋಗಿಯ ಸಂಗಡ| ಬರಲೊಪ್ಪಿ ಕಳುಹುವುದೂ ॥೬॥ ನಮ್ಮನಿಮ್ಮಯಸ್ನೇಹ ವರಿಯದೆಪರುವತ| ತಮ್ಮಸಹಾಯಕೆಂದು॥ ನಿಮ್ಮನುಬಯಸಿದು ದೆಮ್ಮಯಕಾರ್ಯಕೆ| ನೆಮ್ಮದಿಯಾಗಿಹುದು ॥೭॥

ವಾರ್ಧಿಕ

ಪೊರಟುಪೋಗುತ ಮಾರ್ಗಮಧ್ಯೆಡೇರೆಯನಿಕ್ಕಿ| ಇರೆನೀವು ಪರುವತನು ಸಂತಸದಿಸ್ವಾಗತಕೆ| ತರಳನಾಗಿಹ ಮಲಯಕೇತುವಂ ಕಳುಹಿದರೆ| ಶರೆವಿಡಿದು ನಮಗೊಪ್ಪಿಸೀ॥ ಎರಡನೆಯದಾ ಚಂದ್ರಗುಪ್ತನಂ ಕಳುಹಿದರೆ| ಶಿರವಚಂಡಾಡುವುದು ಬೇರೆಯವರೈತಂದ|ರ್ತೆರಳಿಶಾಹುರಿ ಪುರಿಗೆಸಮಯವಂಸಾಧಿಸುತ ಲೆರಡುಕಾರ್ಯವಗೈವುದೂ॥೧॥

ರಾಗ ಬೇಗಡೆ ಅಷ್ಟತಾಳ

(ಕಾಶೀಶ) ನಂದರಿಷ್ಟವು ತಿಳಿಯಿತೀದಿನದೀ| ತಜ್ಞಾತಿಯಾಗಿಹ| ಚಂದ್ರಗುಪ್ತನ ವಧೆಯುಸಾಹಸದೀ॥ ಮುಂದಕಾ ಪರುವತನ ಸುತನನು| ತಂದುಕೊಡುವುದು ನಮ್ಮ ಕಾರ್ಯಗ| ಳೆಂದುಬರದಿರೆ ನಿಷ್ಟೆಇಂದಿದ| ಹೊಂದಿಸುತ ಕೃತಿಗೈದು ತೋರುವೆ ॥೧॥ ಚರನಕಳುಹಿ ನಿಯೋಗಿಯನೆಕರೆಸೀ| ಪೇಳಿದನು ಭೂಮಿಪ| ಹರುಷವಾಯಿತು ಪರುವತನುಸ್ಮರಿಸೀ॥ ಕರೆಯಕೊಟ್ಟಿರೆ ನಾವುಬರದಿರೆ| ಧರೆಯುಮೆಚ್ಚಿತೆ ಸ್ನೇಹಉಳಿವುದೆ| ಬರುವೆ ಸೇನೆಯಕೂಡಿನಾಳೆಗೆ| ಬರೆದುಕಳುಹೀ ಯರ್ಥವೆನಲಿಕೆ ॥೨॥
(ನಿಯೋಗಿ) ಪರುವತೇಶನಕ್ಷೇಮ ದರ್ಥದಲೀ| ಪ್ರಭುಬರಲುವಪ್ಪಿರೆ| ಸರ್ವಸನ್ನಹ| ದಿಂದ ಹರುಷದಲೀ॥ ಬರುವರಲ್ಲವೆ ತಮ್ಮಸ್ವಾಗತ| ಕರಸನಾಸುತ ನಲ್ಲದಿರ್ದೊಡೆ

Scanned by CamScanner

ತರಳನಾಗಿಹ ಚಂದ್ರಗುಪ್ತನ| ತ್ವರೆಯೊಳ್ಕಳುಹದೆ ಬಿಡರುದೊರೆಗಳು ||೩|| ಈಗಲೇ ಬರೆಯುವೆನು ಧನಿಗಳಿಗೇ| ಅವರುತ್ತರವತಿಳಿ| ದಾಗಲೇಅರುಹುವೆನೆನಾ ತನುಗೇ|| ಸಾಗಿಬಂದರೆ ಪರುವತೇಶ್ವರ| ನಾಗಹರ್ಷಿತನಾಗಿ ತಮ್ಮನು| ಸ್ವಾಗತಿಸಿಕರೆದೊಯ್ಯೆ ಯೋಗ್ಯತೆ| ಗಾಗತುಷ್ಠಿಯು ಪುಷ್ಟಿಯಪ್ಪುದು ||೪|| ಎನುತಕಾಶೀಶನನು ಸಂತಯಿಸೀ| ಕಮಲಾಪೀಡ| ಮನದಿತರ್ಕಿಸಿ ಬರೆದುಸಂಗ್ರಹಿಸೀ|| ತನಗೆತಿಳಿದಿಹ ವರ್ತಮಾನವ| ಅನುಚರಗೆತಿಳುಹುತ್ತ ಪತ್ರವ| ಘನಜವದಿ ಚಾಣಕ್ಯಗೀಯಲು| ಅನುಮತಿಯ ತಾನಿತ್ತು ಕಳುಹಲು ||೫||

ರಾಗ ಕೇದಾರಗೌಳ ಅಷ್ಟತಾಳ

ನಂದರ ವಧೆಗೀಗ ಸಕಲಸನ್ನಹದಿಂದ| ಹೊಂದಿಕೆ ಯಾಗಿಹುದೂ|| ಎಂದುದು: ಖಾಂತ್ಯವ ಗೈಯ್ಯಲಿಕಾಗದು| ಇಂದುಮಂಗಲಗೈಯ್ವೆನೂ ||೧|| ಸೊರಬದತಾಲ್ಲೂಕು ಉಳವಿಯಸನಿಹದ| ಕೆರೆಯಕೊಪ್ಪದ ಗ್ರಾಮದಿ|| ಇರುವಬೇಳೂರಿನ ದ್ವಿಜರಾಮಚಂದ್ರನ| ಹಿರಿಯ ಕುವರನಾಗಿಹ ||೨|| ಜಾಣಮಂಜಪ್ಪ ನೆಂಬಭಿದಾನ ವಿದ್ಯವು ಗೌಣವು ಸಂಸ್ಕೃತಿಯಾ|| ಕಾಣದಬುದ್ಧಿಯು| ಪ್ರಾಣಪ್ರಾಸುಗಳಲ್ಲಿ| ಜ್ಞಾನವಿಲ್ಲವು ಎನಗೇ ||೩|| ಅಪ್ಪುತಪ್ಪುಗಳನ್ನು ತಿದ್ದಿಕಾರುಣ್ಯದಿ| ವಪ್ಪವ ಗೈಯ್ಯುತಲೀ|| ಸಪ್ಪೆಯಾಗದಹಾಗೆ ಇಪ್ಪಮೂಲಕೆಕುಂದ| ನಪ್ಪಿಸದಿಂದಯದಿ ||೪|| ಕಲೆಗೆಕಾಣಿಕೆಯಾಗಿ ಅರ್ಪಿಸಿದೀಕೃತಿ| ಗೊಲಿದು ಗಾಯಕರಿದನೂ|| ನಲವಿಂದನಟರಿಂಗೆ| ಸುಲಭದಅರ್ಥದಿ| ತಿಳುಹಿಹಾಡಲುಬೇಡ್ವೆನು ||೫||

ರಾಗ ಡವಳಾರ

ಮಂಗಲಜಯತುಶ್ರೀ ವೇಣುಗೋಪಾಲಗೆ| ಮಂಗಲಕೆಳದಿ ರಾಮೇಶ್ವರಗೇ|| ಮಂಗಲಬೇಳೂರ ವರವಿರುಪಾಕ್ಷಗೆ| ಮಂಗಲಗಿರಿ ವೆಂಕಟೇಶ್ವರಗೇ| ಮಂಗಲಂಜಯ ಮಂಗಲಂ ||೧|| ಕೆರೆಯಕೊಪ್ಪದೊಳಿಂದು| ಸ್ಥಿರವಾಗಿನೆಲಸಿಹ| ಕರಿಮುಖನಾಗಿಹ ಗಣರಾಜಗೇ| ಸುರಭಿಪುರದ ರಂಗನಾಥಗೆ ಜಯಜಯ| ಗುರುರಾಘವೇಂದ್ರಭಾರತಿ ಸ್ವಾಮಿಗೇ|| ಮಂಗಲಂಜಯಮಂಗಲಂ ||೨|| ಹತ್ತವತಾರದಿ ಭಕ್ತರಸಲಹುವ| ನಿತ್ಯ ನಿರ್ಮಲ ಸ್ವಪ್ರಕಾಶನಿಗೇ|| ಚಿತ್ತಶುದ್ಧಿಯನಿತ್ತು ಅನುದಿನಪೊರೆಯುವ| ದತ್ತಗುರೂ ವರ ರಡಿಗಳಿಗೇ| ಮಂಗಲಂ ಶುಭಮಂಗಲಂ ||೩||

ಪದ 431ಕ್ಕೆ ಮಂಗಲಮಹಾ ಶ್ರೀ

ಶಾಲಿವಾಹನಶಕ ೧೮೯೮ನೆ ನಲನಾಮ ಸಂವತ್ಸರದ ಬಾದ್ರಪದ ಶುದ್ಧ ೪

ಶನಿವಾರ ತಾರೀಖು 28-8-76

ಬೇಳೂರು ಜಾಣ ಮಂಜಪ್ಪ

ಕೆರೇಕೊಪ್ಪ ವಿಲೇಜು, ಸೊರಬತಾಲ್ಲೂಕು, ಉಳವಿ ಹೋಬಳಿ

ಅಂಚೆ-ನಿಸರಾಣಿ